# M.C.C. BANK LTD

ESTD 1912

Admin. Office.: MCC Bank Bldg, Mulky Sundarram Shetty Road,
Mangaluru - 575 001. Ph.: 0824 2421369 / 2445746
Email: ho@mccbank.in / Web:www.mccbank.in

## ಮಂಗಳೂರು ಕೆಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ಲಿ.

# ANNUAL REPORT

## 103ನೇ
## ವಾರ್ಷಿಕ ಸಾಮಾನ್ಯ ಸಭೆ

MCC Bank Mobile Banking App

Free Fund Transfer IMPS




Recharge Mobile, DTH

ATM Locator

Branch Locator

Pay Bills

Link: **a1tiny.in/mcc**

Qr Code:

Password: member number

**ದಿನಾಂಕ: 20-11-2021 ನೇ ಶನಿವಾರ ಬೆಳಿಗ್ಗೆ 11.00 ಘಂಟೆಯಿಂದ**
**ಸ್ಥಳ: ವಿಡಿಯೋ ಕಾನ್ಫೆರೆನ್ಸ್/ ವರ್ಚುವಲ್ ಮೀಟಿಂಗ್**

## ಸದಸ್ಯರ ಗಮನಕ್ಕೆ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಬ್ಯಾಂಕಿನ ಉಪನಿಯಮಗಳ ಪ್ರಕಾರ ಮತ ನೀಡಲು ಅರ್ಹತೆ ಇರುವ 1000 ಸದಸ್ಯರ ಹಾಜರಾತಿಯ ಸಾಮಾನ್ಯ ಸಭೆಯ ಸಭಾವಶ್ಯಕ ಸಂಖ್ಯೆ (ಕೋರಂ) ಆಗಿರುವುದರಿಂದ ಅರ್ಹ ಸದಸ್ಯರು ತಪ್ಪದೆ ವಿಡಿಯೋ ಕಾನ್ಫೆರೆನ್ಸ್/ವರ್ಚುವೆಲ್ ಮೀಟಿಂಗ್ ಮುಖಾಂತರ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

# THE MANGALORE CATHOLIC CO-OPERATIVE BANK LTD

## BOARD OF DIRECTORS



**Anil Lobo**
Chairman



**Jerald Jude D'Silva**
Vice-Chairman

## DIRECTORS



Dolphy J. Patrao



Marcel M D'Souza



Andrew D'Souza



Joseph A Patrao



Herald J Monteiro



Elroy K Crasto



J P Rodrigues



David D'Souza



Roshan D'Souza



Irene Rebello



Freeda F D'Souza



C.G. Pinto




Michael D'Souza

Professional Directors



Sunil Menezes
General Manager (i/c)



# P.F.X. SALDANHA

**FOUNDER PRESIDENT (1912-1913)**

**29.04.1860 ★ 23.02.1935**

# ಅಧ್ಯಕ್ಷರ ನುಡಿ



ನಮ್ಮ ಹಾಗೂ ನಿಮ್ಮ ನೆಚ್ಚಿನ ಎಮ್ ಸಿ ಸಿ ಬ್ಯಾಂಕಿನ ಅಧ್ಯಕ್ಷನಾಗಿ ಬ್ಯಾಂಕಿಗೆ ಹಾಗೂ ನಿಮಗೆ ಕಳೆದ ಮೂರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನನ್ನ ಹೃದಯಾಂತರಾಳದ ಪ್ರಣಾಮಗಳು.

ಕಳೆದ ಎರಡು ವಸಂತಗಳಿಂದ ನಮ್ಮೆಲ್ಲರ ಬದುಕಿನ ಮೇಲೆ ಕೊರೋನಾ ಮಹಾಮಾರಿ ಭೀಕರ ಪರಿಣಾಮ ಬೀರಿದೆ. ಜಾಗತಿಕ ಮಟ್ಟದಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಇದರ ಪರಿಣಾಮ ಅತೀವವಾಗಿತ್ತು. ಸುದೈವವಶಾತ್ ನಮ್ಮ ಸದಸ್ಯರು, ಗ್ರಾಹಕರು, ಸಾಲಗಾರರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಬ್ಯಾಂಕಿನ ಮೇಲೆ ಇರಿಸಿದ ವಿಶ್ವಾಸ ಮತ್ತು ಕಳಕಳಿಯ ಕಾರಣದಿಂದ ನಮ್ಮ ಬ್ಯಾಂಕ್ ಈ ಮಹಾಮಾರಿ ಹೊಡೆತವನ್ನು ಸಮರ್ಥವಾಗಿ ಎದುರಿಸಿರುವುದು ಮಾತ್ರವಲ್ಲದೆ ಉತ್ತಮ ಮಟ್ಟದ ಸೇವೆ ಸಲ್ಲಿಸಿ ಯಶಸ್ಸಿನತ್ತ ದಾಪುಗಾಲಿಡತೊಡಗಿದೆ. ಈ ಸಂದರ್ಭದಲ್ಲಿ ಕೊರೋನಾ ವಾರಿಯರ್ಸ್ ಆಗಿ ತಮ್ಮ ಸುಭದ್ರತೆಯ ಹಂಗು ತೊರೆದು ಗ್ರಾಹಕರಿಗೆ ಅತ್ಯುತ್ತಮ ಸೇವೆ ಸಲ್ಲಿಸಿದ ನಮ್ಮ ಬ್ಯಾಂಕಿನ ಸಿಬ್ಬಂದಿ – ಅಧಿಕಾರಿಗಳ ಪರಿಶ್ರಮ ನಿಜಕ್ಕೂ ಪ್ರಶಂಸಾರ್ಹ.

ರಾಷ್ಟ್ರದಾದ್ಯಂತ ಆರ್ಥಿಕ ಬೆಳವಣಿಗೆಯ ಮೇಲೆ ಕೊವಿಡ್ – 19 ರ ಕರಿಛಾಯೆ ಬಿದ್ದರೂ ಎಮ್ ಸಿ ಸಿ ಬ್ಯಾಂಕಿನ ಲಾಭದಾಯಕ ಬೆಳವಣಿಗೆ ಕುಂಠಿತವಾಗಿಲ್ಲ, ಮಾತ್ರವಲ್ಲ, ಅದು ಇನ್ನಷ್ಟು ಸುದೃಢತೆಯತ್ತ ಸಾಗಿದೆ. ಇದರ ಸಾಕ್ಷಿಯಾಗಿ 2020 ರಲ್ಲಿ 7.17% ಇದ್ದ ಬ್ಯಾಂಕಿನ ನಿವ್ವಳ ಎನ್‌ಪಿಎ (ಅನುತ್ಪಾದಕ ಆಸ್ತಿ) ಪ್ರಮಾಣವು ವರದಿ ಸಾಲಿನಲ್ಲಿ (2021) **1.92%** ಕ್ಕೆ ಇಳಿದಿದೆ ಹಾಗೂ ಬ್ಯಾಂಕಿನ ಲಾಭವು 2020ರಲ್ಲಿ 2.48 ಕೋಟಿ ಇತ್ತು. ಅದು ವರದಿ ಸಾಲಿನಲ್ಲಿ (2021) ದಾಖಲೆ ಪ್ರಮಾಣದಲ್ಲಿ **5.96** ಕೋಟಿಗೆ ಹೆಚ್ಚಿದೆ. ಇವೆರಡೂ ಸಾಧನೆಗಳು, 16 ಶಾಖೆಗಳಿರುವ ನಮ್ಮ ಬ್ಯಾಂಕಿನ ಮಟ್ಟಿಗೆ ನಿಜಕ್ಕೂ ಮಹತ್ವದ ಮೈಲಿಗಲ್ಲಾಗಿವೆ. ಈ ಸಾಧನೆಯಲ್ಲಿ ಬ್ಯಾಂಕಿನ ಪ್ರಬಂಧಕರ ಪಾತ್ರ ಮಹತ್ವದ್ದಾಗಿದೆ.

ಆಧುನಿಕ ಯುಗದಲ್ಲಿ ಎಲ್ಲಾ ಕ್ಷೇತ್ರದಲ್ಲಿ ಗ್ರಾಹಕರೊಡನೆ ನೇರ ಸಂಪರ್ಕಕ್ಕೆ ಬರುವ ಸಿಬ್ಬಂದಿ ವರ್ಗದವರಿಗೆ ಕಾಲಕ್ಕೆ ತಕ್ಕಂತೆ ಅಗತ್ಯ ತರಬೇತಿಗಳನ್ನು ನೀಡಲಾಗುತ್ತದೆ. ಅದೇ ರೀತಿ ನಮ್ಮ ಬ್ಯಾಂಕಿನ ಅಧಿಕಾರಿ – ಸಿಬ್ಬಂದಿ ವರ್ಗದವರಿಗೆ ಬ್ಯಾಂಕಿಂಗ್ ಕ್ಷೇತ್ರದ ಕೌಶಲ್ಯಗಳ ಕುರಿತಾದ ತರಬೇತಿ ಹಾಗೂ ಕೌಶಲ್ಯ ಪರೀಕ್ಷೆಗಳನ್ನು ನಿರ್ವಹಿಸಿ ಅವರಲ್ಲಿ ಸೇವೆಯ ಮತ್ತು ವೃತ್ತಿ ಗುಣಮಟ್ಟದ ನಿಪುಣತೆ ಬೆಳೆದು, ಅವರು ಹೆಚ್ಚು ಸಮರ್ಥರಾಗಿ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ, ನಮ್ಮ ಸಿಬ್ಬಂದಿಗಳಿಂದ ಗ್ರಾಹಕರಿಗೆ ಮತ್ತು ಬ್ಯಾಂಕಿಗೆ ಉತ್ತಮ ಸೇವೆ ಲಭ್ಯವಾಗುವಂತೆ ಮಾಡಲಾಗಿದೆ.

ನಮ್ಮ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಅವರು ಬ್ಯಾಂಕಿನ ಶಾಖೆಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಉತ್ತಮ ವಾತಾವರಣ ದೊರೆಯುವಂತಾಗಲು, ಒಳಾಂಗಣ ಆಕರ್ಷಕವಾಗಿ ಕಾಣುವುದಕ್ಕಾಗಿ ಹಾಗೂ ಇತರ ಬ್ಯಾಂಕುಗಳಿಗೆ ಸರಿಸಮಾನವಾಗಿ ನಿಲ್ಲಲು ಅಗತ್ಯ ಆಧುನೀಕರಣ ಮಾಡಲಾಗಿದೆ. ಎಲ್ಲಾ ಶಾಖೆಗಳಿಗೆ ಆಕರ್ಷಕ ಮತ್ತು ನಮ್ಮ ಬ್ಯಾಂಕಿನ ಸೇವಾ ಉತ್ಪನ್ನಗಳನ್ನು ಜಾಹೀರಾತು ಮಾಡುವ ವಿವರಗಳನ್ನುಳ್ಳ ಮುಖಮಂಟಪಗಳನ್ನು ಒದಗಿಸಲಾಗಿದೆ. ಈಗ ನಮ್ಮ ಬ್ಯಾಂಕಿನ ಶಾಖೆಗಳಿಗೆ ಅಗತ್ಯ ಸೇವೆಗಳಿಗಾಗಿ ಭೇಟಿ ನೀಡುವ ಸದಸ್ಯರು ಮತ್ತು ಗ್ರಾಹಕರು ಈ ಸುಧಾರಣೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿರುವುದು ಕೇಳಿಸಿಕೊಂಡಾಗ, ನಮ್ಮ ಶ್ರಮ ಸಾರ್ಥಕವೆನಿಸುತ್ತದೆ.

ಕಳೆದ ಕೆಲವು ವರ್ಷಗಳಿಂದ ಬ್ಯಾಂಕ್ ಡಿಜಿಟಲೀಕರಣದತ್ತ ಸಾಗುತ್ತಿರುವುದನ್ನು ನೀವು ಗಮನಿಸಿದ್ದೀರಿ, ಈಗಾಗಲೇ ಎಟಿಎಮ್ ಸವಲತ್ತುಗಳು, ಮೊಬೈಲ್ ಬ್ಯಾಂಕಿಂಗ್, ಕ್ಯೂಆರ್ ಕೋಡ್ ಸ್ಕ್ಯಾನಿಂಗ್, ಎಸ್ ಎಮ್ ಎಸ್ ಅಲರ್ಟ್, ಮುಂತಾದ ಸೇವೆಗಳಿಂದ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿರುವ ನಮ್ಮ ಬ್ಯಾಂಕ್ ಇವುಗಳೆಲ್ಲವನ್ನೂ ಇನ್ನಷ್ಟು ಉನ್ನತ ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುತ್ತಿದೆ. ಅದೇ ರೀತಿ ಕಳೆದ ಹತ್ತು ವರ್ಷಗಳಿಂದ ನಮ್ಮ ಬ್ಯಾಂಕಿನಲ್ಲಿ ನಿರ್ವಹಿಸಲ್ಪಡುತ್ತಿದ್ದ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಕ್ರಮೇಣ 'ವರ್ಚುವಲ್ ಬ್ಯಾಂಕಿಂಗ್' ಪೂರ್ಣ ವಾಸ್ತವ ರೂಪ ಪಡೆದು ಗ್ರಾಹಕರು ಮನೆಯಿಂದಲೇ ತಮ್ಮ ಎಲ್ಲಾ ಅಗತ್ಯ ಬ್ಯಾಂಕಿಂಗ್ ವ್ಯವಹಾರ ಮಾಡಬಹುದಾಗಿದೆ.

ಕ್ರಿ ಶ 1912 ರ ಮೇ ತಿಂಗಳಿನಲ್ಲಿ ಸ್ಥಾಪನೆಗೊಂಡ ನಮ್ಮ ನಿಮ್ಮೆಲ್ಲರ ಅಭಿಮಾನದ ಎಮ್ ಸಿ ಸಿ ಬ್ಯಾಂಕ್ 2022 ರ ಮೇ ತಿಂಗಳಿನಲ್ಲಿ ಶತಮಾನೋತ್ತರ ದಶಮಾನೋತ್ಸವ ಆಚರಿಸುತ್ತಿದೆ. ಈ ಶುಭ ಸಂದರ್ಭದಲ್ಲಿ ನಮ್ಮ ಬ್ಯಾಂಕಿನ ಉತರೋತ್ತರ ಅಭಿವೃದ್ಧಿಗಾಗಿ ನಾವು ಮಗದೊಮ್ಮೆ ಕಟಿಬದ್ಧರಾಗೋಣ. ನಮ್ಮ ಬ್ಯಾಂಕ್ ತನ್ನ ಬದುಕಿನ 110 ವರ್ಷದ ಸಂಭ್ರಮ ಕಾಣುತ್ತಿರುವ ಈ ಸಮಯ ನಮ್ಮ ಬ್ಯಾಂಕನ್ನು ಆಧುನೀಕರಣದತ್ತ ಒಯ್ಯಲು ಹಾಗೂ ನಾಡಿನ ಅಭಿವೃದ್ಧಿಪರ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಒಂದಾಗಿ ಬೆಳೆಸಲು ನಾವೆಲ್ಲರೂ ಕೈಜೋಡಿಸಿ ಶ್ರಮಿಸಿಬೇಕಾದ ಕಾಲದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ನಿಮ್ಮೆಲ್ಲರ ಪ್ರತಿನಿಧಿಯಾಗಿ ಶ್ರಮಿಸುತ್ತಿದೆ. ಬ್ಯಾಂಕಿನ ಉತ್ತರೋತ್ತರ ಅಭಿವೃದ್ಧಿಗೆ ನಮಗೆ ನಿಮ್ಮೆಲ್ಲರ ಬೆಂಬಲ ಮತ್ತು ಮಾರ್ಗದರ್ಶನದ ಅಗತ್ಯವಿದೆ. ನಿಮ್ಮ ಧನಾತ್ಮಕ ಬೆಂಬಲ ನಮಗೆ ಖಂಡಿತವಾಗಿಯೂ ದೊರೆಯುವುದೆಂಬ ಅಖಂಡ ವಿಶ್ವಾಸದೊಂದಿಗೆ,

**ಅನಿಲ್ ಲೋಬೊ, ಅಧ್ಯಕ್ಷರು**

# ಮಂಗಳೂರು ಕೆಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ,
**ಮುಲ್ಕಿ ಸುಂದರ ರಾಮ ಶೆಟ್ಟಿ ರಸ್ತೆ, ಹಂಪನಕಟ್ಟ, ಮಂಗಳೂರು,**

## ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಮಂಗಳೂರು ಕೆಥೋಲಿಕ್ ಕೋ.ಓಪರೇಟಿವ್ ಬ್ಯಾಂಕ್(ನಿ.) ಇದರ 103ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 20.11.2021 ಶನಿವಾರ ಬೆಳಿಗ್ಗೆ 11.00 ಘಂಟೆಗೆ ಸರಿಯಾಗಿ ಬ್ಯಾಂಕಿನ ಸರ್ವ ಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಸರಕಾರದ ಆದೇಶ ಸಂಖ್ಯೆ ಸಇ 60 ಸಿಎಲ್‌ಎಮ್ 2021, ಬೆಂಗಳೂರು, ದಿನಾಂಕ 04.08.2021ರ ಪ್ರಕಾರ ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್(Video Conference/Virtual meeting) ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ದಿನಾಂಕದಂದು ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್ ಮುಖಾಂತರ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

**ಕಾರ್ಯಸೂಚಿ**

1. ಸಭೆಯ ನೋಟೀಸನ್ನು ಓದಿ ದಾಖಲಿಸುವುದು. (ಪುಟ ಸಂಖ್ಯೆ 3)
2. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
3. 2020–21ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಳಿಯ ವರದಿಯನ್ನು ಓದಿ ಅಂಗೀಕರಿಸುವುದು. (ಪುಟ ಸಂಖ್ಯೆ 4–5)
4. 2020–21ರ ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತಖ್ತೆಯನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 6–11)
5. 2020–21ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿಯನ್ನು ಪರಿಗಣಿಸುವುದು. (ಪುಟ ಸಂಖ್ಯೆ 12–14)
6. 2021–22ನೇ ಸಾಲಿನ ಆಡಳಿತ ಮಂಡಳಿಯವರು ಸೂಚಿಸಿದ ಕಾರ್ಯವ್ಯವಹಾರಗಳ ಅನುಮೋದನೆ. (ಪುಟ ಸಂಖ್ಯೆ 15)
7. 2020–21ನೇ ಸಾಲಿಗೆ ಮಂಜೂರಾಗಿದ್ದ ಬಜೆಟಿನ ಮಿತಿಗಿಂತ ಹೆಚ್ಚಿಗೆ ಆದ ವೆಚ್ಚವನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 16)
8. 2021–22ನೇ ಸಾಲಿನ ವಾರ್ಷಿಕ ಬಜೆಟನ್ನು ಪರಿಶೀಲಿಸಿ ಮಂಜೂರು ಮಾಡುವುದು. (ಪುಟ ಸಂಖ್ಯೆ 17)
9. 2020–21ನೇ ಸಾಲಿನ ನಿವ್ವಳ ಲಾಭ ವಿಂಗಡನೆಗೆ ಮಂಜೂರಿ ಕೊಡುವುದು. (ಪುಟ ಸಂಖ್ಯೆ 16)
10. 2021–22ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಆನುಮೋದನೆ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ. (ಪುಟ ಸಂಖ್ಯೆ 16)
12. ಪ್ರಸ್ತುತ ಉಪವಿಧಿಗಳಿಗೆ ತಿದ್ದುಪಡಿಗಳನ್ನು ಅಂಗೀಕರಿಸುವುದು. (ಪುಟ ಸಂಖ್ಯೆ 18 ರಿಂದ 20)
13. ಮುನ್ಸೂಚನೆಯ ಮೇರೆಗೆ ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

13.10.2021 ಮಹಾಪ್ರಬಂಧಕರು (ಪ್ರ)

**ಸೂಚನೆ :**

1. ಬ್ಯಾಂಕಿನ ಲೆಕ್ಕ ಪತ್ರಗಳಿಗೆ ಸಂಬಂಧಪಟ್ಟ ಹಾಗೂ ಇತರ ಯಾವುದೇ ಮಾಹಿತಿಗಳ ಬಗ್ಗೆ 7 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮಹಾಪ್ರಬಂಧಕರ ಗಮನಕ್ಕೆ ತರತಕ್ಕದ್ದು.
2. ಮಾನ್ಯ ಸದಸ್ಯರು ವರ್ಚುವಲ್ ಸಭೆಯಲ್ಲಿ ಭಾಗವಹಿಸಲು ನೋಟೀಸು/ಮೊಬೈಲ್ ಮುಖಾಂತರ ಕಳುಹಿಸಿದ ಲಿಂಕ್‌ನ್ನು ತೆರೆಯಲು ಸದಸ್ಯ ಸಂಖ್ಯೆಯನ್ನು ಬಳಸಬೇಕಾಗುತ್ತದೆ. ಕ್ಯೂಆರ್ ಕೋಡ್ ಬಳಸಬೇಕಾದ್ದಲ್ಲಿ ಕ್ಯೂಆರ್ ಸ್ಕ್ಯಾನ್ ಆ್ಯಪ್‌ಅನ್ನು ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿ ಬಳಸಬೇಕಾಗಿರುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ನಮ್ಮ ಟೋಲ್ ಫ್ರೀ ನಂಬ್ರ 1800 123 2966ಗೆ ಬೆಳಿಗ್ಗೆ 10ರಿಂದ ಸಂಜೆ 8ರ ತನಕ ಕರೆ ಮಾಡಬಹುದು.
3. ಬ್ಯಾಂಕಿನ ಸದಸ್ಯರು ತಮ್ಮ ಸದಸ್ಯ ಸಂಖ್ಯೆಯನ್ನು ಬಳಸಿ ಸಭೆಯಲ್ಲಿ ಭಾಗವಹಿಸಿದ್ದಲ್ಲಿ ಮಾತ್ರ ಹಾಜರಾತಿಯನ್ನು ಪರಿಗಣಿಸಲಾಗುವುದು. ಬೇರೆ ಸದಸ್ಯರ ಸದಸ್ಯ ಸಂಖ್ಯೆಯಲ್ಲಿ ಬ್ಯಾಂಕಿನ ಸದಸ್ಯರಲ್ಲದವರನ್ನು ಸಭೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದಿಲ್ಲ ಎಂಬ ಅಂಶವನ್ನು ಗಮನದಲ್ಲಿಡುವುದು. ಹೆಚ್ಚಿನ ವಿವರಗಾಗಿ ತಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಬಹುದು.

ಕಾರ್ಯಸೂಚಿ-3

# ಮಂಗಳೂರು ಕೆಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## ವಾರ್ಷಿಕ ವರದಿ

ಬ್ಯಾಂಕಿನ 103ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರನ್ನೂ ಸ್ವಾಗತಿಸುತ್ತಾ, 2020-21ನೇ ಸಾಲಿನ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಎಮ್.ಸಿ.ಸಿ. ಬ್ಯಾಂಕು ಅವಿಭಜಿತ ದ.ಕ. ಜಿಲ್ಲೆಯಲ್ಲಿ 16 ಶಾಖೆಗಳನ್ನೊಳಗೊಂಡು, ರೂ.456.84 ಕೋಟಿ ಠೇವಣಿ ಹಾಗೂ ರೂ.306.61 ಕೋಟಿ ಸಾಲಗಳನ್ನೊಳಗೊಂಡ ಒಟ್ಟು ರೂ.763.46 ಕೋಟಿ ವ್ಯವಹಾರ ಮಾಡುತ್ತಿದ್ದು, ಈ ವರ್ಷವೂ ಲಾಭ ಗಳಿಸಿರುತ್ತದೆ. ನಮ್ಮ ಬ್ಯಾಂಕಿನ ಎಲ್ಲಾ ಶಾಖೆಗಳು ಲಾಭ ಗಳಿಸಿರುತ್ತವೆ ಎಂಬುದನ್ನು ಸದಸ್ಯರ ಗಮನಕ್ಕೆ ತರಬಯಸುತ್ತೇವೆ. ಈ ಸಾಧನೆಗೆ ಬ್ಯಾಂಕಿನಲ್ಲಿ ಸುಧಾರಿತ ವಿವಿಧ ಸೌಲಭ್ಯಗಳು ಹಾಗೂ ಸೇವೆಯು ಕಾರಣವಾಗಿರುತ್ತದೆ. ಬ್ಯಾಂಕಿನಲ್ಲಿ ಶ್ರಮಿಸುತ್ತಿರುವ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದ ಶ್ರಮ, ಸದಸ್ಯರ ಹಾಗೂ ಗ್ರಾಹಕರ ಪ್ರೋತ್ಸಾಹ, ಬೆಂಬಲ ಮತ್ತು ಸಹಕಾರದ ಫಲ ಸಹ ಕಾರಣವಾಗಿರುತ್ತದೆ.

ಪ್ರಸ್ತುತ ಸಹಕಾರಿ ವರ್ಷದ ಆದಾಯ ವೆಚ್ಚದ ವಿವರ ಹಾಗೂ ವಾರ್ಷಿಕ ವರದಿಯೊಂದಿಗೆ ಲೆಕ್ಕ ಪತ್ರದ ಸಂಕ್ಷಿಪ್ತ ಪಟ್ಟಿಯನ್ನು ತಮ್ಮ ಮುಂದೆ ಮಂಡಿಸಲು ಬಯಸುತ್ತೇವೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿನ ಸಾಧನೆಯನ್ನು ಈ ಕೆಳಗಿನ ಕೋಷ್ಠಕದಲ್ಲಿ ತೋರಿಸಲಾಗಿದೆ.

**ರೂ. ಲಕ್ಷಗಳಲ್ಲಿ**

| ಕ್ರ. ಸಂ. | ವಿವರಗಳು | ವರ್ಷಾಂತ್ಯಕ್ಕೆ | | | | |
|---|---|---|---|---|---|---|
| | | 31.03.2017 | 31.03.2018 | 31.03.2019 | 31.03.2020 | 31.03.2021 |
| 1. | ಪಾಲು ಬಂಡವಾಳ | 1323.85 | 1420.80 | 1429.97 | 1604.49 | 1843.32 |
| 2. | ಮೀಸಲು ನಿಧಿ ಮತ್ತು ಇತರ ನಿಧಿಗಳು | 2878.77 | 3072.83 | 3388.39 | 4187.90 | 4406.90 |
| 3. | ಠೇವಣಿ | 30461.54 | 30779.40 | 33317.32 | 39430.41 | 45684.85 |
| 4. | ಸಾಲ ಮತ್ತು ಮುಂಗಡ | 19138.88 | 20224.62 | 21545.74 | 26506.38 | 30661.41 |
| 5. | ಹೂಡಿಕೆ | 13711.48 | 14310.03 | 14799.90 | 16757.37 | 18872.94 |
| 6. | ನಿವ್ವಳ ಲಾಭ | 219.44 | 366.33 | 521.21 | 245.88 | 596.73 |
| 7. | ನಿವ್ವಳ ಎನ್‌ಪಿಎ | 1.56% | 1.76% | 3.49% | 7.17% | 1.92% |

**ದುಡಿಯುವ ಬಂಡವಾಳ:** 2021 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳವು ರೂ.527.91 ಕೋಟಿ ಇರುತ್ತದೆ.

**ಸಾಲ ಮತು ಠೇವಣಿ ಅನುಪಾತ :** 2021 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಸಾಲ ಮತ್ತು ಠೇವಣಿ ಅನುಪಾತವು 67.12% ಆಗಿರುತ್ತದೆ.

2021 ವರ್ಷದ ಅಂತ್ಯಕ್ಕೆ ಅನುತ್ಪಾದಕ ಸಾಲಕ್ಕೆ ಒದಗಿಸಿದ ಅವಕಾಶದ ಅನುಪಾತವು (Provision coverage ratio) 75.74% ಆಗಿರುತ್ತದೆ.

**ಆಡಳಿತ:** ವರದಿ ವರ್ಷದಲ್ಲಿ ಆಡಳಿತ ಮಂಡಳಿಯ 13 ಸಭೆಗಳು ಜರುಗಿದ್ದು, ಸಾಲ ಮಂಜೂರಾತಿ ಸಮಿತಿಯ 41 ಸಭೆಗಳು, ಆಡಿಟ್ ಸಮಿತಿಯ 10 ಹಾಗೂ ಕಾರ್ಯಕಾರಿ ಸಮಿತಿಯ 8 ಸಭೆಗಳು ಜರಗಿರುತ್ತವೆ.

**CRAR ಪ್ರಮಾಣ:** ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ ಬ್ಯಾಂಕಿನ CRAR ಪ್ರಮಾಣವು ಕಳೆದ ವರ್ಷದಲ್ಲಿ ಶೇಕಡಾ 14.62 ಆಗಿದ್ದು, ವರದಿ ವರ್ಷದಲ್ಲಿ ಶೇಕಡ 14.42 ಇದ್ದು, ಇದು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ ಕನಿಷ್ಠ ಮಿತಿ ಶೇ 9ಕ್ಕಿಂತ ಹೆಚ್ಚಿರುತ್ತದೆ.

**ಆಡಿಟ್ ವರ್ಗೀಕರಣ:** ಸತತ 10 ವರ್ಷಗಳಿಂದ ಬ್ಯಾಂಕ್ ಲೆಕ್ಕ ಪರಿಶೋಧನೆಯಲ್ಲಿ 'A' ಶ್ರೇಣಿಯ ಸಹಕಾರಿ ಸಂಘವಾಗಿ ಗುರುತಿಸಲ್ಪಟ್ಟಿದ್ದು, ಬ್ಯಾಂಕ್ ಆರ್ಥಿಕವಾಗಿ ಸುಧೃಢವಾಗಿದೆ ಎಂಬುದನ್ನು ತೋರಿಸುತ್ತದೆ.

ವರದಿ ವರ್ಷದಲ್ಲಿ 101 ಸಿಬ್ಬಂದಿಗಳು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ವಿಮೆಯನ್ನು ರೂ. 3,00,000/-ವರೆಗೆ ನೀಡಲಾಗಿದೆ.

ಕೊವಿಡ್-19 ಮಹಾಮಾರಿಯ ಸಂಧರ್ಭದಲ್ಲಿ ಕೋವಿಡ್ ವಾರಿಯರ್‌ಗಳಾಗಿ ಕಾರ್ಯ ನಿರ್ವಹಿಸಿದ ನಮ್ಮ ಎಲ್ಲಾ ಸಿಬ್ಬಂದಿಗಳ ಯೋಗಕ್ಷೇಮಕ್ಕಾಗಿ ಕಾಳಜಿ ವಹಿಸಲಾಗಿದೆ. ಅಂತೆಯೇ ಗ್ರಾಹಕರ ಹಾಗೂ ಸಿಬ್ಬಂದಿಗಳ ಹಿತಕ್ಕಾಗಿ ಎಲ್ಲಾ ಶಾಖೆಗಳನ್ನು ಅಗಾಗ ಸಾನಿಟೈಸ್ ಮಾಡಲಾಗಿದೆ.

24 ತಾಸುಗಳಲ್ಲಿ ವಾಹನ ಸಾಲ ನೀಡುವ ವ್ಯವಸ್ಥೆಯನ್ನು ಈ ವರ್ಷವೂ ಮುಂದುವರಿಸಲಾಗಿದೆ. ಎಲ್ಲಾ ಸಾಲಗಳನ್ನು ಇಎಮ್‌ಐ ಸೌಲಭ್ಯದಡಿ ನೀಡುವ ವ್ಯವಸ್ಥೆಯು ವರದಿ ವರ್ಷದಲ್ಲಿ ಮುಂದುವರಿಸಲಾಗಿದೆ. ಚಿನ್ನದ ಮೇಲಿನ ಸಾಲ, ಅಡಮಾನ ಸಾಲ, ವ್ಯಾಪಾರ ಹಾಗೂ ವಾಹನ ಸಾಲಗಳ ಮೇಲೆ ಸ್ಪರ್ಧಾತ್ಮಕ ಬಡ್ಡಿ ದರವನ್ನು ವಿಧಿಸಲಾಗುತ್ತಿದೆ.

2019–20ನೇ ಸಾಲಿನ ಬ್ಯಾಂಕಿನ ವಾರ್ಷಿಕ ಸಿಬ್ಬಂದಿ ಸಮ್ಮೇಳನವನ್ನು ಮಂಗಳೂರಿನ ಮಿಲಾಗ್ರಿಸ್ ಸೆನೆಟ್ ಹಾಲ್‌ನಲ್ಲಿ ದಿನಾಂಕ 03.12.2020ರಂದು ಏರ್ಪಡಿಸಲಾಗಿತ್ತು. ಕಾರ್ಪೊರೇಶನ್ ಬ್ಯಾಂಕಿನ ನಿವೃತ ಉಪ ಮಹಾಪ್ರಬಂಧಕರಾದ ಶ್ರೀ ಶಿವರಾಮ್ ಭಟ್ ಇವರಿಂದ 'ಗ್ರಾಹಕರ ಸೇವೆ' ಬಗ್ಗೆ ತರಬೇತಿಯನ್ನು ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿಗೆ ನೀಡಲಾಯಿತು. ಬ್ಯಾಂಕಿನ ನಿರ್ದೇಶಕಿ ಶ್ರೀಮತಿ ಐರಿನ್ ರೆಬೆಲ್ಲೊ ಇವರು stress management ಬಗ್ಗೆ ತರಬೇತಿಯನ್ನು ನೀಡಿದರು.

2020ನೇ ವರ್ಷ ಮಂಜೇಶ್ವರದ ಸ್ನೇಹಾಲಯ ಆಶ್ರಮದ ನಿವಾಸಿಗಳೊಂದಿಗೆ ದಿನಾಂಕ 06.12.2020ರಂದು ಕ್ರಿಸ್‌ಮಸ್ ಹಬ್ಬವನ್ನು ಆಚರಿಸಲಾಗಿದೆ.

ಗ್ರಾಹಕರ ಅನುಕೂಲಕ್ಕಾಗಿ ಪುತ್ತೂರು ಶಾಖೆಯನ್ನು ನವೀಕರಿಸಿ, ಸಂಪೂರ್ಣ ಹವಾ ನಿಯಂತ್ರಿತ ಶಾಖೆಯನ್ನು ದಿನಾಂಕ 12.12.2020ರಂದು ಉದ್ಘಾಟಿಸಿ, ಗ್ರಾಹಕ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ಸರ್ಕಾರದ ಆದೇಶದಂತೆ ದಿನಾಂಕ 22.12.2020ರಂದು ವರ್ಚುವಲ್ ಮೀಟಿಂಗ್ (Video Conference/Virtual meeting) ಮೂಲಕ ನಡೆಸಲಾಗಿದೆ.

ಬ್ಯಾಂಕಿನ ಸಿಬಂದಿಗಳಿಗೆ ಜಿಎಸ್‌ಟಿಯ (GST) ಇತ್ತೀಚಿನ ಬೆಳವಣಿಗೆ ಹಾಗೂ ಬದಲಾವಣೆಗಳ ಬಗ್ಗೆ ದಿನಾಂಕ 23.01.2021ರಂದು ಸಂತ ಅಲೋಶಿಯಸ್ ಕಾಲೇಜು ಸಭಾಂಗಣದಲ್ಲಿ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ. ಬ್ಯಾಂಕಿನ ಸಿಬ್ಬಂದಿಗಳಿಗೆ ಟಿಡಿಎಸ್‌ನ(TDS) ಇತ್ತೀಚಿನ ಬೆಳವಣಿಗೆ ಹಾಗೂ ಬದಲಾವಣೆಗಳ ಬಗ್ಗೆ ದಿನಾಂಕ 13.02.2021ರಂದು ಸಂತ ಅಲೋಶಿಯಸ್ ಕಾಲೇಜು ಸಭಾಂಗಣದಲ್ಲಿ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

ಮಂಗಳೂರು ಹಂಪನಕಟ್ಟ ಶಾಖೆ ಮತ್ತು ಆಡಳಿತ ಕಚೇರಿಗೆ ಬರುವ ಎಲ್ಲಾ ಸದಸ್ಯರು ಮತ್ತು ಗ್ರಾಹಕರಿಗೆ ಸೂಕ್ತವಾದ ವಾಹನ ನಿಲುಗಡೆ ವ್ಯವಸ್ಥೆಯನ್ನು ರೂಪಿಸಲಾಗಿದ್ದು, ಇದರಿಂದ ಬ್ಯಾಂಕಿಗೆ ಬರುವ ಗ್ರಾಹಕರಿಗೆ ಮತ್ತು ಸದಸ್ಯರಿಗೆ ಗೌರವಾರ್ಹ ವಾಹನ ನಿಲ್ದಾಣ ಸವಲತ್ತು ಲಭಿಸಿದಂತಾಗಿದೆ. ಇದರ ಮುಂದುವರಿದ ಭಾಗವಾಗಿ ಗ್ರಾಹಕರಿಗೆ ಮತ್ತು ಸದಸ್ಯರಿಗೆ ಪ್ರತ್ಯೇಕವಾಗಿ ಹಿರಿಯ ನಾಗರಿಕರಿಗೆ ಬ್ಯಾಂಕಿನ ಆಡಳಿತ ಕಛೇರಿಗೆ ಬರಲು ಅನುಕೂಲವಾಗುವಂತೆ ಲಿಫ್ಟ್ ವ್ಯವಸ್ಥೆಯನ್ನು ಮಾಡಲಾಗಿದೆ.

ಬ್ಯಾಂಕಿನ ಅಭಿವೃದ್ದಿಗೆ ಸೂಕ್ತವಾದ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನವನ್ನು ಸೂಕ್ತ ಸಮಯದಲ್ಲಿ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಸಹಕಾರಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ, ಅಂತರಿಕ ಲೆಕ್ಕ ಪರಿಶೋಧಕರಿಗೆ, ಶಾಸನಬದ್ಧ ಲೆಕ್ಕಪರಿಶೋಧಕರಿಗೆ, ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಹಾಗೂ ವಾಹನ ಮೌಲ್ಯಮಾಪಕರುಗಳಿಗೆ ನನ್ನ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಪ್ರಗತಿಗೆ ಶ್ರಮಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರಿಗೆ, ಸಿಬ್ಬಂದಿ ವರ್ಗ, ಠೇವಣಿದಾರರಿಗೆ, ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಹಾಗೂ ಸದಸ್ಯರಿಗೆ, ಬ್ಯಾಂಕಿನ ಹಿತೈಷಿಗಳಿಗೆ ಹಾಗೂ ಹಿತಚಿಂತಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಇದುವರೆಗೆ ನಮಗೆ ಸಂಪೂರ್ಣ ಸಹಕಾರ ನೀಡಿ ಬ್ಯಾಂಕಿನ ಏಳಿಗೆಗೆ ಕಾರಣೀಕರ್ತರಾದ ತಾವುಗಳು ಮುಂದೆಯೂ ಬ್ಯಾಂಕನ್ನು ಪ್ರಗತಿ ಪಥದಲ್ಲಿ ಬೆಳೆಸಲು ಸಹಕಾರ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಆಡಳಿತ ಮಂಡಳಿಯ ಪರವಾಗಿ,

**ಅನಿಲ್ ಲೋಬೊ, ಅಧ್ಯಕ್ಷರು**

ಸದಸ್ಯರ ವಿಳಾಸದಲ್ಲಿ ಹಾಗು ಸಹಿಯಲ್ಲಿ ಬದಲಾವಣೆಯಾದಲ್ಲಿ ತಕ್ಷಣ ಆಡಳಿತ ಕಛೇರಿಗೆ ಭೇಟಿ ನೀಡಿ ತಮ್ಮ ಸದಸ್ಯತ್ವದ ಪಟ್ಟಿಯಲ್ಲಿ ವಿಳಾಸವನ್ನು ಹಾಗೂ ಸಹಿಯನ್ನು ಬದಲಾಯಿಸಿ. ಕೆಲವು ಸದಸ್ಯರಿಗೆ ಕಳುಹಿಸಿದ ವಾರ್ಷಿಕ ವರದಿ ಪುಸ್ತಕ ಮತ್ತು ಇತರ ಪತ್ರ ವ್ಯವಹಾರಗಳು, 'ಬಿಟ್ಟಿದ್ದಾರೆ,(left) ವಿಳಾಸದ ಕೊರತೆ(insufficient address), ಗೊತ್ತಿಲ್ಲ(not known), ನಿಧನರಾಗಿದ್ದಾರೆ(deceased)' ಎಂಬ ಅಂಚೆಯ ಷರಾದೊಂದಿಗೆ ಹಿಂದೆ ಬರುತ್ತಿದ್ದು, ಸದಸ್ಯರಿಗೆ ವಾರ್ಷಿಕ ವರದಿ ತಲುಪದಿದ್ದಲ್ಲಿ ಆಡಳಿತ ಕಛೇರಿಗೆ ಭೇಟಿ ನೀಡಿ ವಿಳಾಸವನ್ನು ಪರಿಶೀಲಿಸಿ, ವಾರ್ಷಿಕ ವರದಿಯನ್ನು ಪಡೆಯಲು ಕೋರಲಾಗಿದೆ.

ಕಾರ್ಯಸೂಚಿ-4

# ಮಂಗಳೂರು ಕಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

## ಆಡಳಿತ ಕಛೇರಿ: ಸೈಂಟ್ ಅಲೋಶಿಯಸ್ ಕಾಲೇಜು ರಸ್ತೆ, ಹಂಪನಕಟ್ಟ, ಮಂಗಳೂರು-575001

## ದಿನಾಂಕ 31.03.2021ಕ್ಕೆ ಇದ್ದಂತೆ ಲಾಭ ಮತ್ತು ನಷ್ಟದ ತ:ಖ್ತೆ Profit and Loss Account as on 31.03.2021

| ದಿನಾಂಕ | ವೆಚ್ಚ | 31.03.2021 | | ದಿನಾಂಕ | ಆದಾಯ | 31.03.2021 | |
|---|---|---|---|---|---|---|---|
| 31.03.2020ಕ್ಕೆ ಇದ್ದಂತೆ | ವಿವರಗಳು | ಮೊತ್ತ | ಮೊತ್ತ | 31.03.2020ಕ್ಕೆ ಇದ್ದಂತೆ | ವಿವರಗಳು | ಮೊತ್ತ | ಮೊತ್ತ |
| 23,88,66,392 | ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿ Interest on Deposits, Borrowings, etc | | 26,17,12,657.90 | 25,50,75,945 | ಸಾಲಗಳ ಮೇಲಿನ ಬಡ್ಡಿ Interest received on loans | | 30,53,12,210.90 |
| 5,48,88,622 | ಸಂಬಳ, ಭತ್ಯೆಗಳು ಮತ್ತು ಭವಿಷ್ಯ ನಿಧಿ Salaries, Allowances & Provident Fund | | 4,40,92,829.32 | 14,50,70,419 | ಹೂಡಿಕೆಗಳ ಮೇಲಿನ ಬಡ್ಡಿ Interest on investments | | 11,78,15,452.12 |
| 17,83,423 | ತೆರಿಗೆ ಮತ್ತು ಶುಲ್ಕಗಳು Tax and Rates | | 11,45,190.28 | | | | |
| | ಆಢಳಿತ ಮತ್ತು ಕಛೇರಿ ವೆಚ್ಚಗಳು Administrative & Office expenses | | | 11,99,817 | ಕಮಿಷನ್, ವಿನಿಮಯ ಮತ್ತು ಬ್ರೋಕರೇಜ್ Commissioner Exchange and Brokerage | | 9,65,147.26 |
| 42,15,999 | ಬಾಡಿಗೆ Rent | 45,83,499.64 | | | | | |
| 3,18,406 | ಅಂಚೆ ವೆಚ್ಚ (Postage) | 1,50,177.40 | | 1,96,32,784 | ಇತರ ಆದಾಯ (Other income) | | 1,62,51,207.88 |
| 21,38,804 | ವಿದ್ಯುತ್ Lighting | 24,21,465.58 | | | | | |
| 4,94,907 | ದೂರವಾಣಿ ವೆಚ್ಚಗಳು (Telephone expenses) | 6,08,219.54 | | | | | |
| 14,37,222 | ದೂರವಾಣಿ ಗುತ್ತಿಗೆ ವೆಚ್ಚಗಳು (Telephone Leaseline) | 13,55,520.11 | | | | | |
| 6,60,681 | ಇತರ ಆಡಳಿತ ವೆಚ್ಚಗಳು (Other Adm. Expenses) | 4,39,518.72 | 95,58,400.99 | | | | |
| | ಸಾಮಾನ್ಯ ಹಾಗೂ ಮಂಡಳಿ ಸಭೆಗಳ ವೆಚ್ಚಗಳು General Body and Board expenses | | | | | | |
| 2,99,100 | ನಿರ್ದೇಶಕರ ಭತ್ಯೆಗಳು (Allowance to Directors) | 3,42,524.00 | | | | | |
| 4,37,592 | ಸಭೆಯ ವೆಚ್ಚಗಳು (Metting expenses) | 3,40,357.80 | 6,82,881.80 | | | | |
| 50,09,539 | ವಿಮೆ Insurance | | 62,56,310.33 | | | | |
| 38,48,494 | ದುರಸ್ತಿ ನವೀಕರಣ ಮತ್ತು ನಿರ್ವಹಣೆ (Repairs,Renewals and Maintentence) | | 54,61,112.57 | | | | |

| | | | | | | | |
|---|---|---|---|---|---|---|---|
| | ಇತರ ವೆಚ್ಚಗಳು | | | | | | |
| 84,475 | ಕಾನೂನು ವೆಚ್ಚ Law Charges | 2,31,597.00 | | | | | |
| 12,31,984 | ಮುದ್ರಣ ಮತ್ತು ಲೇಖನ ಸಾಮಗ್ರಿ (Printing & Stationery) | 13,04,568.86 | | | | | |
| 14,83,054 | ಜಾಹಿರಾತು Advertisement | 14,46,732.84 | | | | | |
| 37,48,959 | ಸಹಕಾರಿ ನಿಧಿ ಏಜಂಟ್ (Sahakari Nidhi Agent) | 33,07,825.50 | | | | | |
| 3,86,950 | ಲೆಕ್ಕ ಪರಿಶೋಧನಾ ಶುಲ್ಕ (Audit fees) | 3,05,200.00 | | | | | |
| 2,48,660 | ಹೂಡಿಕೆಗಳ ಮೇಲೆ ಪ್ರೀಮಿಯಂ Premium paid on investments | 3,33,155.58 | | | | | |
| 2,55,928 | ಬ್ಯಾಂಕಿಂಗೇತರ ಆಸ್ತಿಗಳ ಮಾರಾಟದಿಂದ ಆದ ನಷ್ಟ Loss on sale of non banking assets | 63,859.54 | | | | | |
| 46,11,931 | ಇತರ ವೆಚ್ಚಗಳು (Other expenses) | 58,53,803.63 | 1,28,46,742.95 | | | | |
| 6,63,94,573 | ಹೊಣೆಗಾರಿಕೆ ನಿಬಂಧನೆಗಳು Provisions | | 3,43,05,354.72 | | | | |
| 35,44,292 | ಸವಕಳಿ Depreciation | - | 46,09,688.11 | | | | |
| 2,45,88,977 | ನಿವ್ವಳ ಲಾಭ (Current Profit) | | 5,96,72,849.19 | | | | |
| 42,09,78,964 | ಒಟ್ಟು ಮೊತ್ತ | | 44,03,44,018.16 | 42,09,78,964 | ಒಟ್ಟು ಮೊತ್ತ | | 44,03,44,018.16 |

ದಿನಾಂಕ: 13.08.2021
ಸ್ಥಳ: ಮಂಗಳೂರು

ಸಹಿ/–
ಸುನಿಲ್ ಐ. ಮಿನೇಜಸ್
ಪ್ರಭಾರ ಮಹಾಪ್ರಬಂಧಕರು

ಸಹಿ/–
ಡಿ.ಜೆ.ಪತ್ರಾವೊ
ನಿರ್ದೇಶಕರು

ಸಹಿ/–
ಜೆರಾಲ್ಡ್ ಜೂಡ್ ಡಿ'ಸಿಲ್ವಾ
ಉಪಾಧ್ಯಕ್ಷರು

ಸಹಿ/–
ಅನಿಲ್ ಲೋಬೊ
ಅಧ್ಯಕ್ಷರು

ಸಹಿ/–
ಸಿ.ಎ. ಸುಜಯ ದಿನೇಶ್ ಆಳ್ವ
ಚಾರ್ಟರ್ಡ್ ಅಕೌಂಟೆಂಟ್
ಸದಸ್ಯ ಸಂಖ್ಯೆ 207695
UDIN: 21207695AAAAEY4936

# ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

## ಆಡಳಿತ ಕಛೇರಿ: ಸೈಂಟ್ ಅಲೋಶಿಯಸ್ ಕಾಲೇಜು ರಸ್ತೆ, ಹಂಪನಕಟ್ಟ, ಮಂಗಳೂರು–575001

## ದಿನಾಂಕ 31.03.2021ಕ್ಕೆ ಇದ್ದಂತೆ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆ Balance Sheet as on 31.03.2021

| ಹಿಂದಿನ ಸಾಲಿನ ಮೊಬಲಗು | ಜವಬ್ದಾರಿಗಳು (Liabilities) ವಿವರಗಳು | ಪ್ರಸಕ್ತ ಸಾಲಿನ ಮೊಬಲಗು ಮೊತ್ತ | ಹಿಂದಿನ ಸಾಲಿನ ಮೊಬಲಗು | ಆಸ್ತಿಗಳು (Assets) ವಿವರಗಳು | ಪ್ರಸಕ್ತ ಸಾಲಿನ ಮೊಬಲಗು ಮೊತ್ತ |
|---|---|---|---|---|---|
| | | | | **ನಗದು Cash** | |
| 16,04,49,100 | ಪಾಲು ಬಂಡವಾಳ (Share Capital) | 18,43,32,200.00 | 61,73,886 | ಕೈಯಲ್ಲಿರುವ ನಗದು Cash in hand | 67,22,635.00 |
| | | | 90,62,300 | ಎಟಿಎಮ್‌ನಲ್ಲಿರುವ ನಗದು (Cash in ATM) | 87,88,800.00 |
| 41,59,29,622 | ಮೀಸಲು ನಿಧಿ ಮತ್ತು ಇತರ ನಿಧಿಗಳು | 44,06,89,797.67 | 4,13,36,132 | ಇತರ ಬ್ಯಾಂಕುಗಳಲ್ಲಿರುವ ನಗದು | 4,67,27,742.77 |
| | **Reserves and Surplus** | | | cash at other banks | |
| | | | 5,50,00,000 | ಕರೆ ಹಣ (call money) | 0.00 |
| | ಠೇವಣಿಗಳು (Deposits) | | | | |
| 3,12,55,01,565 | ನಿರಖು ಠೇವಣಿಗಳು (Fixed deposits) | 3,67,32,03,471.82 | | ಇತರ ಬ್ಯಾಂಕುಗಳಲ್ಲಿರುವ ಶಿಲ್ಕು | |
| | Fixed deposits | | | Balance with other Banks | |
| 77,62,81,250 | ಉಳಿತಾಯ ಠೇವಣಿ | 85,06,83,489.69 | 7,87,95,760 | ಚಾಲ್ತಿ ಖಾತೆಗಳು (Current Accounts) | 11,26,87,097.71 |
| | Saving Deposits | | 57,34,28,457 | ನಿರಖು ಠೇವಣಿಗಳು (Fixed Deposits) | 26,64,99,900.87 |
| 4,12,58,755 | ಚಾಲ್ತಿ ಖಾತೆಗಳು | 4,45,99,486.01 | | | |
| | | | 79,34,73,260 | ಹೂಡಿಕೆಗಳು SLR Investments | 1,22,74,68,265.00 |
| – | ಅಂತರ ಶಾಖಾ ಹೊಂದಾಣಿಕೆಗಳು | 8,646.18 | 25,38,35,000 | ಹೂಡಿಕೆಗಳು Non SLR Investments | 39,33,25,775.43 |
| | (Inter Branch Adjustments) | | | | |
| – | ಶಾಖಾ ಕ್ಲಿಯರಿಂಗ್ ಅಕೌಂಟ್ | – | | ಸಾಲ – ಮುಂಗಡಗಳು Advances | |
| | (Branch Clearing Account) | | 42,22,21,630 | ಅಲ್ಪಾವಧಿ ಸಾಲಗಳು | 67,13,76,036.24 |
| | | | | Short term loans & Advances | |
| | ಮೀಸಲುಗಳು (ಕಾಂಟ್ರಾ) Reserves (Contra) | | 20,14,39,312 | ಮಧ್ಯಮಾವಧಿ ಸಾಲಗಳು (Medium Term) | 15,81,89,741.42 |
| 96,41,27,046 | ಸುಸ್ತಿ ಸಾಲಗಳ ಬಡ್ಡಿ ಮೀಸಲು | 77,36,08,407.01 | 2,02,69,77,552 | ದೀರ್ಘಾವಧಿ ಸಾಲಗಳು (Long term) | 2,23,65,75,438.48 |
| | Overdue interest reserve | | | | |
| 53,47,423 | ಸಾಲಗಳ ಇತರ ಶುಲ್ಕಗಳ ಮೀಸಲು | 47,68,727.90 | | ಬರತಕ್ಕ ಬಡ್ಡಿಗಳು (Interest receiveable) | |
| | Loan other charges reserve | | 96,41,27,046 | ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು | 77,36,07,718.01 |
| | | | | (Interest Receivable on loans) | |
| | ಬಡ್ಡಿ ಕಾದಿರಿಸುವಿಕೆಗಳು (Interest payable) | | 53,47,423 | ಸಾಲಗಳ ಮೇಲೆ ಬರತಕ್ಕ ಇತರ ಖರ್ಚು) | 47,68,727.90 |
| 1,38,12,465 | ಠೇವಣಿಗಳಿಗೆ ಬಡ್ಡಿ ಕಾದಿರಿಸಿದ್ದು | 84,02,294.00 | | (Loan Other Charges Receivable) | |
| | Interest payable on Deposits | | 3,33,76,888 | ಪ್ರಮಾಣಿತ ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು | 3,31,51,637.00 |
| 5,64,42,687 | ಇತರ ಜವಬ್ದಾರಿಗಳು (Other liabilities) | 4,03,93,628.94 | | (Interest Receivable - Standard) | |

| | | | | | |
|---|---|---|---|---|---|
| 2,45,88,977 | ಲಾಭ ಮತ್ತು ನಷ್ಟ ಖಾತೆ<br>Profit and loss account | 5,96,72,849.19 | 2,01,58,114 | ಹೂಡಿಕೆಗಳ ಮೇಲೆ ಬರತಕ್ಕ ಬಡ್ಡಿಗಳು<br>Interest Receivable on Investments | 2,43,13,356.93 |
| | | | 3,35,52,783 | ಸ್ಥಿರ ಹಾಗೂ ಚರ ಆಸ್ತಿಗಳು Fixed Assets | 4,21,52,007.94 |
| | | | 9,24,843 | ಅಂತರ ಶಾಖಾ ಹೊಂದಾಣಿಕೆಗಳು<br>Inter branch adjustment | - |
| | | | 6,45,08,501 | ಇತರ ಆಸ್ತಿಗಳು Other assets | 7,40,08,117.71 |
| **5,58,37,38,889** | **ಒಟ್ಟು ಮೊತ್ತ** | **6,08,03,62,998.41** | **5,58,37,38,889** | **ಒಟ್ಟು ಮೊತ್ತ** | **6,08,03,62,998.41** |
| **53,68,790.12** | **Contigent Liabilities** | **45,84,576.00** | | | |

ಸ್ಥಳ:ಮಂಗಳೂರು
ದಿನಾಂಕ:13.08.2021

| ಸಹಿ/– | ಸಹಿ/– | ಸಹಿ/– | ಸಹಿ/– |
|---|---|---|---|
| ಸುನಿಲ್ ಐ. ಮಿನೇಜಸ್<br>ಪ್ರಭಾರ ಮಹಾಪ್ರಬಂಧಕರು | ಡಿ.ಜೆ.ಪತ್ರಾವೊ<br>ನಿರ್ದೇಶಕರು | ಜೆರಾಲ್ಡ್ ಜೂಡ್ ಡಿ'ಸಿಲ್ವಾ<br>ಉಪಾಧ್ಯಕ್ಷರು | ಅನಿಲ್ ಲೋಬೊ<br>ಅಧ್ಯಕ್ಷರು |

ನಾನು ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಮಂಗಳೂರು ಇದರ 2020–21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ನನ್ನ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿದ್ದು ಅವುಗಳು ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯ ಮತ್ತು ನಾನು ಪಡೆದಂತಹ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಲಗ್ತೀಕರಿಸಿದ ನನ್ನ ನಿಖರವಾದ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು ಬ್ಯಾಂಕಿನ ಲಾಭ– ನಷ್ಟದ ತ:ಖ್ತೆ ಹಾಗೂ ಆಸ್ತಿ ಹೊಣೆಗಾರಿಕೆ ತ:ಖ್ತೆಯು ದಿನಾಂಕ 31.03.2021ರಲ್ಲಿದ್ದಂತೆ ಬ್ಯಾಂಕಿನ ನೈಜ ಹಾಗೂ ಸಮಂಜಸ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

ಸಹಿ/–
ಸಿ.ಎ. ಸುಜಯ ದಿನೇಶ್ ಆಳ್ವ
ಚಾರ್ಟರ್ಡ್ ಅಕೌಂಟೆಂಟ್
ಸದಸ್ಯ ಸಂಖ್ಯೆ 207695
UDIN: 21207695AAAAEY4936

ಸ್ಥಳ:ಮಂಗಳೂರು
ದಿನಾಂಕ:13.08.2021

# Notes on Accounts of balance sheet as on 31-03-2021

1. Capital to Risk Weight Asset Ratio (CRAR): 14.42%
2. Movement of CRAR (Rs in lakhs)

| Particulars | 31.03.2021 | 31.03.2020 |
|---|---|---|
| Tier I Capital | 3857.12 | 3529.63 |
| Tier II Capital | 606.10 | 284.82 |
| Total Capital | 4463.22 | 3814.45 |
| Total Risk Weighted Assets | 30947.23 | 26085.21 |

3. **Investments:** (Rs in lakhs)

| | | |
|---|---|---|
| a. Book Value of Investments | 16207.89 | 10473.04 |
| b. Face Value of Investments | 16380.31 | 10563.30 |
| c. Market Value of Investments | 17519.74 | 11575.58 |

d. Details of issuer composition of non –SLR investments and non performing non SLR Investments Issuer composition of non-SLR Investments

| No. | Issuer | Amount (in lakhs) | Extent of 'below investment grade securities' | Extent of 'Unrated Securities' | Extent of 'unlisted Securities' |
|---|---|---|---|---|---|
| 1 | PSUs | 0 | 0 | 0 | 0 |
| 2 | FIs | 0.30 | 0 | 0 | 0 |
| 3 | Public Sector Banks | 0 | 0 | 0 | 0 |
| 4 | Mutual Fund | 3932.91 | 0 | 0 | 0 |
| 5 | Others | 0 | 0 | 0 | 0 |
| 6 | Provision held towards depreciation | 11.78 | 0 | 0 | 0 |

**Non performing non-SLR investments**

| Particulars | Amount (in lakhs) |
|---|---|
| Opening Balance | 0 |
| Additions during the year since 1st April | 0 |
| Reduction during the above period | 0 |
| Closing balance | 0 |
| Total provisions held | 0 |

4. Advances against (Rs in lakhs)

| | | |
|---|---|---|
| Real Estate | 59.75 | 129.26 |
| Construction and Business | 114.25 | 121.09 |
| Housing | 5607.15 | 5487.19 |

5. Advances against shares and debentures : 0
6. Advances to Director's, their relatives, Companies / Firms in which they are interested: (Rs in lakhs)

| | | |
|---|---|---|
| a. Fund Based | 4.55 | 19.25 |
| b. Non fund based | 0.00 | 0.00 |

| | | 31.03.2021 | 31.03.2020 |
|---|---|---|---|
| 7. | Cost of Deposits (average) | 6.47% | 6.59% |

| 8. | NPAs (in lakhs) | 31.03.2021 | 31.03.2020 |
|---|---|---|---|
| | a. Gross NPAs | 2284.72 | 3185.62 |
| | b. Net NPA | 554.38 | 1478.33 |

| 9. | **Movement of NPAs, increase/(Decrease)** (in lakhs) | 31.03.2021 | 31.03.2020 |
|---|---|---|---|
| | Gross NPAs | -900.90 | 1103.81 |
| | Net NPAs | -220.19 | 774.57 |

| 10. | **Profitability** | 31.03.2021 | 31.03.2020 |
|---|---|---|---|
| | a. Interest income as a percentage of working funds | 7.75% | 7.77% |
| | b. Non-interest income as a percentage of working funds | 0.59% | 1.41% |
| | c. Operating profit as a percentage of working funds | 1.99% | 1.98% |
| | d. Return on Assets | 1.01% | 0.48% |
| | e. Business (Deposits + Advances) per employee (in lakhs) | 748.49 | 616.23 |
| | f. Profit per employee (in lakhs) | 5.85 | 2.30 |

11. Provisions made towards NPAs, depreciation in investments, standard assets

| (Rs in lakhs) | 31.03.2021 | 31.03.2020 |
|---|---|---|
| NPAs | 1730.34 | 1745.67 |
| Depreciation in investments | 11.78 | 11.78 |
| Standard assets | 113.61 | 93.45 |

12. Movement in provisions:(increase/(decrease) (in lakhs)

| | | |
|---|---|---|
| NPAs | 78.84 | 367.62 |
| Depreciation in investments | 0 | -9.72 |
| Standard assets | 20.16 | 14.61 |

13. Foreign Currency assets & liabilities (if applicable) : NIL

| 14. | Payment of DICGC Insurance premium | 61.81 | 38.17 |
|---|---|---|---|
| | Arrears | 0 | 0 |

Insurance premium has been paid up to date to DICGC, no arrears.

15. Penalty imposed by RBI : NIL
16. Restructured accounts : NIL
17. Fixed Assets – Valuation / Revaluation : Not applicable
18. DEAF (Depositors' Education and Awareness Fund) 2014 Accounts: (in lakhs)

| | 31.03.2021 | 31.03.2020 |
|---|---|---|
| Opening balance of amounts transferred to DEAF | 44.89 | 44.10 |
| Add : Amount transferred to DEAF during the year | 0.99 | 0.87 |
| Less : Amount reimbursed by DEAF to claim | 0.04 | 0.07 |
| Closing balance of amounts transferred to DEAF | 45.84 | 44.89 |
| Closing balance of DEAF at RBI | 45.84 | 44.89 |
| Claims receivable | NIL | NIL |

ಕಾರ್ಯಸೂಚಿ–5

# ಮಂಗಳೂರು ಕಥೊಲಿಕ್ ಕೋ–ಅಪರೇಟಿವ್ ಬ್ಯಾಂಕ್ (ನಿ.)

## 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಆಡಳಿತ ಮಂಡಲಿಯ ಅನುಪಾಲನಾ ವರದಿ

1. ಸಾಲಗಳನ್ನು ಮಂಜೂರು ಮಾಡುವಾಗ ಲೆಕ್ಕಪರಿಶೋಧಿತ ಹಣಕಾಸು ತಖ್ತೆಗಳನ್ನು ಪಡೆಯುವ ಕ್ರಮವಿಡಲಾಗಿದೆ. ನಗದು ಉದ್ದರಿ ಸಾಲಗಳನ್ನು ನವೀಕರಣ ಮಾಡುವ ಸಂಧರ್ಭಗಳಲ್ಲಿ ಲೆಕ್ಕಪರಿಶೋಧಿತ ಹಣಕಾಸು ತಖ್ತೆಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳುವ ಕ್ರಮ ಆಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.

**ಅನುಪಾಲನ ವರದಿ :**

ನಗದು ಉದ್ದರಿ ಸಾಲಗಳನ್ನು ನವೀಕರಣ ಮಾಡುವ ಸಂಧರ್ಭಗಳಲ್ಲಿ ಲೆಕ್ಕಪರಿಶೋಧಿತ ಹಣಕಾಸು ತಖ್ತೆಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

2. ಸಾಲಗಳ ಸ್ವಾಸ್ತ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ ನಿಯಮಗಳನ್ನು ರೂಪಿಸಿಕೊಂಡಿರುವುದಿಲ್ಲ. ಇದನ್ನು ಗಣಕೀಕರಣಗೊಳಿಸಲು ಸೂಚಿಸಲಾಗಿದೆ. (Allotment Health Code of RBI)

**ಅನುಪಾಲನ ವರದಿ :**

ಹೊಸ ಸಿಬಿಎಸ್ ತಂತ್ರಜ್ಞಾನವನ್ನು ಆಳವಡಿಸಲು ಕ್ರಮ ಕೈಗೊಂಡಿದ್ದು, ಸಾಲಗಳ ಸ್ವಾಸ್ತ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ ನಿಯಮಗಳನ್ನು ರೂಪಿಸಿಕೊಳ್ಳಲಾಗುವುದು.

3. ಸಾಲ ವಿತರಿಸುವ ಸಂಧರ್ಭದಲ್ಲಿ ಯೋಜನೆ ವರದಿಯನ್ನು (ಪ್ರೊಜೆಕ್ಟ್ ರಿಪೋರ್ಟ್) ಕೂಲಂಕುಷವಾಗಿ ಪರಿಶೀಲಿಸಬೇಕು. ಯೋಜನೆಯ ವೆಚ್ಚವು ಪಡೆದ ಅಂದಾಜು, ಉಲ್ಲೇಖ, ಕಾರ್ಯಸಾಧ್ಯತಾ ಅಧ್ಯಯನ, ಅನುಪಾತಗಳು ಮತ್ತು ಬ್ಯಾಂಕಿನೊಂದಿಗೆ ಅಸ್ತಿತ್ವದಲ್ಲಿ ಇರುವ ಸಾಲ ಸೌಲಭ್ಯಗಳು ಮತ್ತು ವ್ಯವಹಾರ ಯೋಜನೆಗಳ ಬಗ್ಗೆ ವಿಶೇಷ ಗಮನ ನೀಡಬೇಕಾಗಿದೆ. ಯೋಜನೆಯ ಅಂದಾಜು ವೆಚ್ಚ, ಹಣಕಾಸಿನ ಪ್ರಕ್ಷೇಪಗಳಲ್ಲಿ ಒದಗಿಸಿದ ತಂತ್ರಾಂಶವು ಕೇವಲ ಹಣಕಾಸಿನ ಹಾಗೂ ಪ್ರಾಯೋಗಿಕ ಊಹೆಗಳ ಆಧಾರದ ಮೇಲೆ ಇರುವುದು. ಯೋಜನೆಯ ವರದಿ ವಾಸ್ತವಕ್ಕೆ ಹತ್ತಿರದಲ್ಲಿ ಇದೆಯೇ ಎಂದು ಪರಿಶೀಲಿಸುವ ಕ್ರಮ ಅಳವಡಿಸಿಕೊಳ್ಳುವುದು.

**ಅನುಪಾಲನ ವರದಿ :**

ಸಾಲ ವಿತರಿಸುವ ಸಂದರ್ಭದಲ್ಲಿ ಬ್ಯಾಂಕಿನೊಂದಿಗೆ ಅಸ್ತಿತ್ವದಲ್ಲಿರುವ ಸಾಲ ಸೌಲಭ್ಯಗಳು ಮತು ವ್ಯವಹಾರ ಯೋಜನೆಗಳು ಯೋಜನೆಯ ವರದಿ ವಾಸ್ತವಕ್ಕೆ ಹತ್ತಿರದಲ್ಲಿ ಇದೆಯೇ ಎಂದು ಪರಿಶೀಲಿಸುವ ಕ್ರಮ ಅಳವಡಿಸಿಕೊಳ್ಳಲಾಗುವುದು.

4. ಸಾಲದ ವಿತರಣೆಯ ಅಂತಿಮ ಬಳಕೆಯನ್ನು (End use utilization), ಸರಕುಪಟ್ಟಿಗಳ (Invoice) ಪ್ರತಿಗಳನ್ನು ಅಥವಾ ಪಾವತಿಗಳ ಪುರಾವೆಗಳನ್ನು ಪಡೆದುಕೊಳ್ಳುವ ಮೂಲಕ ಖಚಿತಪಡಿಸಿಕೊಳ್ಳಬೇಕು. ದುಡಿಯುವ ಬಂಡವಾಳದ ಅಗತ್ಯಗಳಿಗೆ ಅನುಕೂಲವಾಗುವಂತೆ ನೀಡಲಾದ ಸಾಲಗಳ ಸಂಧರ್ಭಗಳಲ್ಲಿ, ಪಾವತಿ ಮಾಡಿದ ಪುರಾವೆಗಳನ್ನು ಪಡೆದುಕೊಳ್ಳುವ ಮೂಲಕ ಅಂತಿಮ ಬಳಕೆಯನ್ನು ಖಚಿತಪಡಿಸಿಕೊಳ್ಳುವ ಕ್ರಮ ಅಳವಡಿಸಿಕೊಳ್ಳುವುದು.

**ಅನುಪಾಲನ ವರದಿ :**

ಸಾಲದ ವಿತರಣೆಯ ಅಂತಿಮ ಬಳಕೆಯನ್ನು (End use utilization), ಸರಕುಪಟ್ಟಿಗಳ (Invoice) ಪ್ರತಿಗಳನ್ನು ಅಥವಾ ಪಾವತಿಗಳ ಪುರಾವೆಗಳನ್ನು ಪಡೆದುಕೊಳ್ಳುವ ಮೂಲಕ ಖಚಿತಪಡಿಸಿಕೊಳ್ಳುವ ಬಗ್ಗೆ ಈಗಾಗಲೇ ಶಾಖೆಗಳಿಗೆ ಕಛೇರಿ ಆದೇಶದ ಮೂಲಕ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

5. ಗೃಹ ಸಾಲಗಳನ್ನು ಹೊರತುಪಡಿಸಿ ಇತರ ಸಾಲಗಳಲ್ಲಿ ಸಾಲದ ಮೊತ್ತವನ್ನು ವಿತರಿಸಿದ ಬಳಿಕ ಬಿಲ್ಲುಗಳನ್ನು ಪಡೆಯಲು ಕ್ರಮ ಇಡುವುದು. ದೊಡ್ಡ ಮೊತ್ತದ ಸಾಲಗಳ ಸಂದರ್ಭಗಳಲ್ಲಿ ಪ್ರಗತಿ ವರದಿಗಳನ್ನು ಸ್ವತಂತ್ರ ಮೌಲ್ಯಮಾಪಕರಿಂದ ಪರಿಶೀಲನೆ ಮಾಡಲು ಕ್ರಮ ಅಳವಡಿಸಿಕೊಳ್ಳುವುದು.

**ಅನುಪಾಲನ ವರದಿ :**

ಗೃಹ ಸಾಲಗಳನ್ನು ಹೊರತುಪಡಿಸಿ ಇತರ ಸಾಲಗಳಲ್ಲಿ ಸಾಲದ ಮೊತ್ತವನ್ನು ವಿತರಿಸಿದ ಬಳಿಕ ಬಿಲ್ಲುಗಳನ್ನು ಪಡೆಯಲು ಹಾಗೂ ದೊಡ್ಡ ಮೊತ್ತದ ಸಾಲಗಳ ಸಂದರ್ಭಗಳಲ್ಲಿ ಪ್ರಗತಿ ವರದಿಗಳನ್ನು ಸ್ವತಂತ್ರ ಮೌಲ್ಯಮಾಪಕರಿಂದ ಪರಿಶೀಲನೆ ಮಾಡಲು ಕ್ರಮ ಅಳವಡಿಸಿಕೊಳ್ಳಲಾಗುವುದು.

6. ಗೃಹ ಸಾಲಗಳಲ್ಲಿ ಪುರ ಸಭೆ/ಪಂಚಾಯತ್ ಪ್ರಾಧಿಕಾರದಿಂದ ಅಥವಾ ಸ್ವತಂತ್ರ ಮೌಲ್ಯಮಾಪಕರಿಂದ ಪೂರ್ಣಗೊಂಡ ವರದಿಯನ್ನು ಪಡೆಯಲು ಕ್ರಮಇಡುವುದು.

**ಅನುಪಾಲನ ವರದಿ :**

ಗೃಹ ಸಾಲಗಳಲ್ಲಿ ಪುರ ಸಭೆ/ಪಂಚಾಯತ್ ಪ್ರಾಧಿಕಾರದಿಂದ ಅಥವಾ ಸ್ವತಂತ್ರ ಮೌಲ್ಯಮಾಪಕರಿಂದ ಪೂರ್ಣಗೊಂಡ ವರದಿಯನ್ನು ಪಡೆಯಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

7. ಅನುತ್ಪಾದಕ ಸಾಲದ ದಾಖಲೆ ಪತ್ರಗಳ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು. ಅನುತ್ಪಾದಕ ಸಾಲಗಳನ್ನು ಸ್ವಯಂಚಾಲಿತವಾಗಿ ಗುರುತಿಸುವ ತಂತ್ರಾಂಶದಲ್ಲಿ ಸಾಲ ಅನುತ್ಪಾದಕದ ದಿನಾಂಕ ಬರುವಂತೆ ಕ್ರಮ ಕೈಗೊಳ್ಳುವುದು. ಸ್ವಯಂಚಾಲಿತ ವ್ಯಕ್ತಿಗತವಾಗಿ (borrower wise) ಅನುತ್ಪಾದಕ ಸಾಲದ ಪಟ್ಟಿ ತಂತ್ರಾಂಶದಲ್ಲಿ ಅಳವಡಿಸಲು ಕ್ರಮ ಇಡುವುದು. ಅನುತ್ಪಾದಕ ಸಾಲಗಳಿಗೆ ಕಲ್ಪಿಸುವ ಅವಕಾಶವು ಸಾಲಕ್ಕೆ ನೀಡಿರುವ ಭದ್ರತೆಯ ಮೌಲ್ಯದ ಮೇಲೆ ಅವಲಂಬಿಸಿರುವುದು. ಆದುದರಿಂದ ಇದರ ಭದ್ರತೆಯ ಮೌಲ್ಯ ಮಾಪನ ಕಡ್ಡಾಯವಾಗಿ 3 ವರ್ಷಕ್ಕೊಮ್ಮೆ ಮಾಡುವಂತೆ ಕ್ರಮ ಇಡುವುದು.

**ಅನುಪಾಲನ ವರದಿ :**

ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಲು ಹೊಸ ಸಿಬಿಎಸ್ ತಂತ್ರಜ್ಞಾನವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

8. ಸಾಲ/ಠೇವಣಿಗಳಿಗೆ ಸಂಬಂಧಪಟ್ಟಂತೆ ಸಂಕ್ಷಿಪ್ತ ವರದಿ/ಕ್ರೋಡಿಕೃತ ಮಾಹಿತಿಗಳು ಗಣಕಯಂತ್ರ ತಂತ್ರಾಂಶದಲ್ಲಿ ಲಭ್ಯವಿರುವುದಿಲ್ಲ, ಈ ಬಗ್ಗೆ ಕ್ರಮ ಕೈಗೊಳ್ಳುವುದು.

**ಅನುಪಾಲನ ವರದಿ :**

ಸಾಲ/ಠೇವಣಿಗಳಿಗೆ ಸಂಬಂಧಪಟ್ಟಂತೆ ಸಂಕ್ಷಿಪ್ತ ವರದಿ/ಕ್ರೋಡಿಕೃತ ಮಾಹಿತಿಗಳು ಗಣಕಯಂತ್ರ ತಂತ್ರಾಂಶದಲ್ಲಿ ಲಭ್ಯವಾಗುವ ಬಗ್ಗೆ ಹೊಸ ಸಿಬಿಎಸ್ ತಂತ್ರಾಂಶದಲ್ಲಿ ಬರುವ ಹಾಗೆ ಕ್ರಮ ಕೈಗೊಳ್ಳಲಾಗುವುದು.

9. ಬ್ಯಾಂಕಿನೊಂದಿಗೆ ಸಾಲವನ್ನು ಮುಚ್ಚಿರುವ ಅಥವಾ ಬ್ಯಾಂಕಿನೊಂದಿಗೆ 3 ವರ್ಷಗಳ ಸದಸ್ಯತ್ವವನ್ನು ಪೂರ್ಣಗೊಳಿಸಿದ ಅಸ್ತಿತ್ವದಲ್ಲಿರುವ ನಾಮಮಾತ್ರ ಸದಸ್ಯರ ಸದಸ್ಯತ್ವವನ್ನು ಬ್ಯಾಂಕ್ ತೆಗೆದುಹಾಕಿಲ್ಲ. ಅದುದರಿಂದ ನಾಮಮಾತ್ರ ಸದಸ್ಯತ್ವ ಖಾತೆಯಲ್ಲಿನ ಬಾಕಿಗಳನ್ನು ಶಾಸನಬದ್ಧ ಮೀಸಲುಗಳಿಗೆ ವರ್ಗಾಯಿಸುವಲ್ಲಿ ಬ್ಯಾಂಕ್ ವಿಫಲವಾಗಿದೆ.

**ಅನುಪಾಲನ ವರದಿ :** ಚುಕ್ತವಾದ ಸಾಲಕ್ಕೆ ಪಡಕೊಂಡ ನಾಮಮಾತ್ರ ಸದಸ್ಯರ ಸದಸ್ಯತ್ವ ಖಾತೆಯಲ್ಲಿನ ಮೊತ್ತವನ್ನು ಶಾಸನಬದ್ಧ ಮೀಸಲು ಖಾತೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು.

10. ಕರ್ನಾಟಕ ಸರಕಾರಿ ಸಂಘಗಳ ಕಾಯ್ದೆ 1959 ಕಲಂ 16(4) ಪ್ರಕಾರ ಸದಸ್ಯತ್ವವನ್ನು ಕೋರಿ ಬಂದ ಅರ್ಜಿಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಂಗೀಕಾರ ಅಥವಾ ತಿರಸ್ಕರಿಸಲ್ಪಟ್ಟಿರುವದನ್ನು ಅರ್ಜಿದಾರನಿಗೆ ತಿಳಿಸದೇ ಇದ್ದ ಪಕ್ಷದಲ್ಲಿ ಸದಸ್ಯತ್ವವನ್ನು ಕಲಂ 1054 ಉದ್ದೇಶಕ್ಕಾಗಿ ಈ ಅವಧಿಯ ಕೊನೆಯ ದಿನಾಂಕದಿಂದ ತಿರಸ್ಕರಿಸಲ್ಪಟ್ಟಿದೆ ಎಂದು ಭಾವಿಸತಕ್ಕದ್ದು (ಬ್ಯಾಂಕಿನ ಉಪನಿಯ 17, ಕಾಯ್ದೆಗೆ ವಿರುದ್ಧವಾಗಿದೆ). ಆದರೆ ಬ್ಯಾಂಕ್ ಹಿಂದಿನ ವರ್ಷಗಳಲ್ಲಿ ಹಲವು ಅರ್ಜಿಗಳನ್ನು ಪಡೆದು ಅವುಗಳನ್ನು ಅಂಗೀಕಾರ ಅಥವಾ ತಿರಸ್ಕರಿಸದೆ, ರೂ.2,02,230ರಷ್ಟು ಷೇರು ಸಸ್ಪೆನ್ಸ್ ಖಾತೆಯಲ್ಲಿ ಇರಿಸಿದೆ. ಇದು ಕಾಯ್ದೆ ಹಾಗೂ ಉಪನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಅನುಪಾಲನ ವರದಿ : ನಾಮಮಾತ್ರ ಸದಸ್ಯರ ಮಾಹಿತಿಯು ಬ್ಯಾಂಕಿನಲ್ಲಿ ಗಣಕೀಕೃತವಾಗಿರುವುದರಿಂದ, ಪ್ರತ್ಯೇಕ ನೋಂದಣಿ ರಿಜಿಸ್ಟರನ್ನು ನಿರ್ವಹಿಸುತ್ತಿಲ್ಲ. ಚುಕ್ತವಾದ ಸಾಲಕ್ಕೆ ಪಡಕೊಂಡ ನಾಮಮಾತ್ರ ಸದಸ್ಯರ ಸದಸ್ಯತ್ವ ಖಾತೆಯಲ್ಲಿನ ಮೊತ್ತವನ್ನು ಶಾಸನಬದ್ಧ ಮೀಸಲು ಖಾತೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು. ಷೇರು ಸಸ್ಪೆನ್ಸ್ ಖಾತೆಯಲ್ಲಿ ಬಾಕಿ ಇದ್ದ ಮೊತ್ತವನ್ನು ಈ ವರ್ಷದಲ್ಲಿ ಹೊಂದಾಣಿಕೆ ಮಾಡಲಾಗುವುದು.

**11. ಠೇವಣಿಗಳು:**

ಠೇವಣಿ ಖಾತೆಗಳ ನಿರ್ವಹಣೆ ಕುರಿತು ಆರ್‌ಬಿಐ ಮಾಸ್ಟರ್ ಸುತ್ತೋಲೆ – ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಸಂಖ್ಯೆ RB/2015-16/5DCBR.BPD(PCB),MC.No.6/13.01.000/2015-16 ಸ್ಪಷ್ಟವಾಗಿ ಹೀಗೆ ಹೇಳುತ್ತದೆ: ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಅಸ್ತಿತ್ವದಲ್ಲಿರುವ ನಿವಾಸಿ, ಖಾತೆದಾರರು ಅನಿವಾಸಿಗಳಾದಾಗ, ಅಂತಹ ಖಾತೆಗಳನ್ನು ಮರುವರ್ಗೀಕರಣ ಮಾಡಿ ಅನಿವಾಸಿ ಕಾರ್ಯಚರಣೆ (NRO) ಖಾತೆಗಳಾಗಿ ಪರಿವರ್ತಿಸಿದಲ್ಲಿ ಅಂತಹ ಖಾತೆಗಳಿಗೆ ಮಾತ್ರ ನಿಯತಕಾಲಿಕ ಬಡ್ಡಿಯನ್ನು ನೀಡಲು ಅನುಮತಿ

ನೀಡಲಾಗಿರುತ್ತದೆ. ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳಿಗೆ ಅನಿವಾಸಿ ಕಾರ್ಯಚರಣೆ (NRO)ಖಾತೆಗಳನ್ನು ತೆರೆಯಲು (ವರ್ಗ ಎ ಅಧಿಕೃತ ವಿತರಕರನ್ನು ಹೊರತುಪಡಿಸಿ) ನಿಷೇಧಿಸಿದೆ. ಅದಾಗ್ಯೂ, ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ NRO ಖಾತೆಗಳನ್ನು ತೆರೆಯದಿದ್ದರೂ, ಅದು ಹಿಂದಿನ ವರ್ಷಗಳಲ್ಲಿ ತೆರೆದ ಅಂತಹ ಖಾತೆಗಳನ್ನು ನಿರ್ವಹಿಸುತ್ತದೆ. ಇದು ಆರ್.ಬಿ.ಐ.ನ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ.

**ಅನುಪಾಲನ ವರದಿ :** ಹಿಂದಿನ ವರ್ಷಗಳಲ್ಲಿ ತೆರೆದ ಎನ್‌ಆರ್‌ಒ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮವನ್ನು ಈಗಾಗಲೇ ಕೈಗೊಳ್ಳಲಾಗಿದೆ.

12. ನಾಣ್ಯಗಳನ್ನು ಹಸ್ತಚಾಲಿತ ಮತ್ತು ಗಣೀಕೃತ ರಿಜಿಸ್ಟರಿನಲ್ಲಿ ಪಂಗಡ ಪ್ರಕಾರ (Denomination – wise) ದಾಖಲಿಸಿರುವುದಿಲ್ಲ.

**ಅನುಪಾಲನ ವರದಿ:** ನಾಣ್ಯಗಳನ್ನು ಹಸ್ತಚಾಲಿತ ಮತ್ತು ಗಣೀಕೃತ ರಿಜಿಸ್ಟರಿನಲ್ಲಿ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದು.

13. ಅನುತ್ಪಾದಕ ಅಸ್ತಿಗಳನ್ನು ಸ್ವಯಂಚಾಲಿತವಾಗಿ ಗುರುತಿಸುವ ಸೌಲಭ್ಯವನ್ನು (automatic recognition of NPA) ಬ್ಯಾಂಕ್ ಹೊಂದಿರುವುದಿಲ್ಲ. ಅನುತ್ಪಾದಕ ಸಾಲಗಳನ್ನು ಶಾಖೆಯ ಅಧಿಕಾರಿಗಳು ಗುರುತಿಸುತ್ತಾರೆ ಮತ್ತು ಅಂತಹ ವರದಿಗಳ ಮೇಲೆ ಮಖ್ಯ ಕಛೇರಿಯು ಅವಲಂಬಿತವಾಗಿರುತ್ತದೆ. ಅನುತ್ಪಾದಕ ಸಾಲಗಳಿಗೆ ಪಡೆದ ಭದ್ರತೆಯ ಮೌಲ್ಯಮಾಪನವನ್ನು ಕನಿಷ್ಠ 3 ವರ್ಷಗಳಿಗೊಮ್ಮೆ ಪಡೆಯುವ ಅಭ್ಯಾಸವನ್ನು ಬ್ಯಾಂಕ್ ಹೊಂದಿರುವುದಿಲ್ಲ. ಅಂತಹ ಭದ್ರತೆಗಳ ಹರಾಜಿನ ಸಮಯದಲ್ಲಿ ಮಾತ್ರ ಬ್ಯಾಂಕ್ ಭದ್ರತೆಯ ಮೌಲ್ಯಮಾಪನವನ್ನು ಮಾಡುತ್ತದೆ. ಭದ್ರತೆಯ ಮೌಲ್ಯವು ಕಡಿಮೆಯಾಗದಂತೆ ನೋಡಿಕೊಳ್ಳುವುದು ಅವಶ್ಯಕ. ಏಕೆಂದರೆ ಸಾಲಗಳ ಅಸುರಕ್ಷಿತ ಭಾಗಕ್ಕೆ 100ರಷ್ಟು ಸೂಕ್ತವಾದ ನಿಬಂಧನೆಗಳನ್ನು ಪ್ರತಿ ವರ್ಷ ಮಾಡಬೇಕಾಗಿದೆ.

**ಅನುಪಾಲನ ವರದಿ :** ಅನುತ್ಪಾದಕ ಅಸ್ತಿಗಳನ್ನು ಸ್ವಯಂಚಾಲಿತವಾಗಿ ಗುರುತಿಸುವ ಸೌಲಭ್ಯವನ್ನು ಸಿಸ್ಟಮ್‌ನಲ್ಲಿ ಅಳವಡಿಸುವ ಕ್ರಮವನ್ನು ಕೈಗೊಳ್ಳಲಾಗುವುದು. ಅನುತ್ಪಾದಕ ಸಾಲಗಳಿಗೆ ಪಡೆದ ಭದ್ರತೆಯ ಮೌಲ್ಯಮಾಪನವನ್ನು ಕನಿಷ್ಠ 3 ವರ್ಷಗಳಿಗೊಮ್ಮೆ ಪಡೆಯಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

14. ಪ್ರಸ್ತುತ ಬ್ಯಾಂಕಿನ ಸಾಫ್ಟ್‌ವೇರ್, ಷೇರ್‌ಕ್ಯಾಪಿಟಲ್ ರಿಜಿಸ್ಟರ್, ಎನ್‌ಪಿಎ ವರದಿಗಳು, ಒತ್ತಡದ ಖಾತೆಗಳ ವರದಿ, ಅಸಾಧಾರಣ ವರದಿಗಳು, ಅನುಮಾದಾಸ್ಪದ ವಹಿವಾಟು ವರದಿ, ಮುಂತಾದ ಅಗತ್ಯ ವರದಿಗಳನ್ನು ನೀಡುತ್ತಿಲ್ಲ ಅಥವಾ ಉತ್ಪಾದಿಸುವುದಿಲ್ಲ.

**ಅನುಪಾಲನ ವರದಿ:** ಅಸಾಧಾರಣ ವಹಿವಾಟು (Exceptional Report) ವರದಿಗಳು ಸೇರಿದಂತೆ ಎಲ್ಲಾ ವರದಿಗಳು (ಎನ್‌ಪಿಎ ವರದಿ, ಷೇರುಕ್ಯಾಪಿಟಲ್ ರಿಜಿಸ್ಟರ್ ಸೇರಿ) ಸೆರೆ ಹಿಡಿಯಲು ಹಾಗೂ ಉತ್ಪಾದಿಸಲು ಸಿಬಿಎಸ್ ಸಾಫ್ಟ್‌ವೇರ್ ಅನ್ನು ಉನ್ನತದರ್ಜೆಗೆ ನವೀಕರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.

ಮಹಾಪ್ರಬಂಧಕರು(ಪ್ರ)

ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದನ್ವಯ ಸಾಲದ ಕಂತುಗಳು ನಿರ್ಧರಿತ ಅವಧಿಯೊಳಗೆ ಬಾರದೇ ಇದ್ದಲ್ಲಿ ಸಾಲದ ಮೊತ್ತದಷ್ಟು ನಿಗದಿಪಡಿಸಿದ ರಕಮನ್ನು ಸಂಶಯಾಸ್ಪದ ಸಾಲದ ನಿಧಿಗೆ ಕಾಯ್ದಿರಿಸುವುದು ಕಡ್ಡಾಯವಾಗಿರುತ್ತದೆ. ಇದರಿಂದ ಬ್ಯಾಂಕಿನ ಲಾಭದ ಪ್ರಮಾಣ ಕಡಿಮೆಯಾಗುವುದು. ಕಾರಣ ಸಾಲದ ಕಂತನ್ನು ನಿಗದಿತ ವೇಳೆಗೆ ಕಟ್ಟಲು ಪ್ರತಿ ತಿಂಗಳಿಗೊಮ್ಮೆ ಅಸಲು ಮತ್ತು ಬಡ್ಡಿ ಹಣ ಪಾವತಿಸಿ. ಈ ದಿಶೆಯಲ್ಲಿ ತಪ್ಪಿದರೆ ಮುಂದೆ ತಾವು ಪಡೆಯುವ ಸಾಲ ಸೌಲಭ್ಯದಿಂದ ವಂಚಿತರಾಗುವಿರಿ ಎಂದು ತಮ್ಮ ಗಮನಕ್ಕೆ ತರಬಯಸುತ್ತೇವೆ.

ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ ಹೊಂದಿದ 10 ವರ್ಷ ಮತ್ತು ಮೇಲ್ಪಟ್ಟು ಅವಧಿಯವರೆಗೆ ವ್ಯವಹಾರ ನಡೆಸದೇ ಇರುವ (In operative accounts) ಎಲ್ಲಾ ಠೇವಣಿಗಳನ್ನು ಡಿಪಾಜಿಟ್ ಎಜ್ಯುಕೇಶನ್ ಅವೇರ್‌ನೆಸ್ ಸ್ಕೀಮ್ 2014ರನ್ವಯ ಭಾರತೀಯ ರಿಜರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಈ ಕಾರಣ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಠೇವಣಿಗಳು ಚಾಲ್ತಿ ಇರುವಂತೆ ನೋಡಿಕೊಳ್ಳಬೇಕು.

**ಕಾರ್ಯಸೂಚಿ–6**

# ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.
# 2021–22ನೇ ವರ್ಷದ ಕಾರ್ಯಕ್ರಮ

1. ಸದಸ್ಯರು ರೂ.5.78 ಕೋಟಿವರೆಗೆ ಭದ್ರತಾ ಸಾಲಗಳನ್ನು ಅಥವಾ ನಿಗದಿತ ಮಿತಿಯೊಳಗೆ ಹೆಚ್ಚುವರಿ ಭದ್ರತಾ ಸಾಲಗಳನ್ನು ಅವಶ್ಯಕತೆಗಳಿಗನುಗುಣವಾಗಿ ಪಡೆಯಬಹುದು.
2. ಆಭರಣ ಸಾಲದ ಮಿತಿಯನ್ನು ಸದಸ್ಯರಿಗೆ ರೂ.30.00 ಲಕ್ಷ ಹಾಗೂ ಸಹಸದಸ್ಯರಿಗೆ ರೂ.15.00 ಲಕ್ಷದವರೆಗೆ ನೀಡಲಾಗುವುದು.
3. ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಶೇಕಡಾ 9ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುವುದು.
4. ಸದಸ್ಯರಿಗೆ ಹೊಸ ವಾಹನಗಳನ್ನು ಖರೀದಿಸಲು ವಾಹನ ಸಾಲವನ್ನು ಖರೀದಿ ಕ್ರಯದ ಶೇಕಡಾ 85ರಷ್ಟು, 8.50 ಬಡ್ಡಿ ದರದಲ್ಲಿ ನೀಡಲಾಗುವುದು. ಸಾಲ ಮರುಪಾವತಿ ಮಾಡಲು ಗರಿಷ್ಠ 84 ತಿಂಗಳ ಕಾಲಾವಧಿಯನ್ನು ನೀಡಲಾಗುತ್ತದೆ. ಮನೆ ಕಟ್ಟಡ ನಿರ್ಮಾಣ ಹಾಗೂ ಖರೀದಿಗೆ ಶೇಕಡಾ 9.75ರ ಬಡ್ಡಿ ದರದಲ್ಲಿ ಸಾಲ ಮರುಪಾವತಿ ಮಾಡಲು ಗರಿಷ್ಠ 25 ವರ್ಷಗಳ ಕಾಲಾವಧಿಯನ್ನು ನೀಡಲಾಗುವುದು.
5. ಇ–ಸ್ಟ್ಯಾಂಪಿಂಗ್(E-Stamping) ವ್ಯವಸ್ಥೆ ಇಲ್ಲದ ಶಾಖೆಗಳಲ್ಲಿ ಇ–ಸ್ಟ್ಯಾಂಪಿಂಗ್(E-Stamping) ವ್ಯವಸ್ಥೆಯನ್ನು ರೂಪಿಸಲು ಕ್ರಮ ಕೈಗೊಳ್ಳುವುದು.
6. ಬ್ಯಾಂಕಿನ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ಉನ್ನತ ಮಟ್ಟಕ್ಕೆ ಏರಿಸುವುದು.
7. ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವ ಆಚರಣೆಗೆ ಚಾಲನೆ.
8. ಬ್ಯಾಂಕಿನ ಆಡಳಿತ ಕಛೇರಿಯ ಕಟ್ಟಡದ ಮುಂದಿನ ಭಾಗದ ವಿನ್ಯಾಸವನ್ನು ಬದಲಾಯಿಸುವುದು.
9. ಬ್ಯಾಂಕಿನ ಸಿಬ್ಬಂದಿಗೆ ಆಡಳಿತ ಕಛೇರಿಯಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು.
10. ಬ್ಯಾಂಕಿನ ಆಡಳಿತ ಕಛೇರಿಗೆ ಹೊಸ ರೂಪವನ್ನು ನೀಡುವುದು.
11. ಗ್ರಾಹಕರ ಅನುಕೂಲತೆಗಾಗಿ ಸುರತ್ಕಲ್, ಮೂಡಬಿದ್ರಿ ಹಾಗೂ ಅಶೋಕನಗರ ಶಾಖೆಗಳ ಸ್ಥಳಾಂತರ.
12. ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸುವುದು.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು

ದಿನಾಂಕ : 13.10.2021 ಮಹಾಪ್ರಬಂಧಕರು (ಪ್ರ)

**2017–18 ರಿಂದ ಲಾಭಾಂಶವನ್ನು (ಡಿವಿಡೆಂಡ್) ಪಡೆಯದ ಸದಸ್ಯರು ತಮ್ಮ ಹತ್ತಿರದ ಶಾಖೆಗಳನ್ನು ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಿ ಪಡೆಯಬೇಕಾಗಿ ವಿನಂತಿ. ಲಾಭಾಂಶವನ್ನು ಘೋಷಿಸಿದ ತಾರೀಕಿನಿಂದ 3 ವರ್ಷದ ಒಳಗಾಗಿ ಸದಸ್ಯರು ಲಾಭಾಂಶವನ್ನು (ಡಿವಿಡೆಂಡ್) ಪಡೆಯದೇ ಇದ್ದಲ್ಲಿ ನಿಯಮಗಳಿಗನುಸಾರವಾಗಿ ಅಂತಹ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡ್) ಜಮಾ ಮಾಡಲಾಗುವುದು. ಅದ್ದರಿಂದ ಸದಸ್ಯರು ಡಿವಿಡೆಂಡ್ ಪಡೆಯಲು ಇದೇ ಅಂತಿಮ ನೋಟಿಸು ಎಂದು ಪರಿಗಣಿಸುವುದು. ಈ ಬಗ್ಗೆ ಸದಸ್ಯರಿಗೆ ಪ್ರತ್ಯೇಕ ನೋಟಿಸು ಕಳುಹಿಸಲಾಗುವುದಿಲ್ಲ.**

**ಕಾರ್ಯಸೂಚಿ-7**

## ಬಜೆಟಿನ ಮಿತಿಗಿಂತ ಮೀರಿದ ವೆಚ್ಚಗಳ ಮಂಜೂರಾತಿ

| | | ಅಂದಾಜು ರೂ. ಪೈ. | ವ್ಯಯವಾದುದು ರೂ. ಪೈ | ಹೆಚ್ಚುವರಿ ರೂ. ಪೈ |
|---|---|---|---|---|
| 1 | ದುರಸ್ತಿ ನವೀಕರಣ ಮತ್ತು ನಿರ್ವಹಣೆ ಮತ್ತು ಸವಕಳಿ | 95,00,000.00 | 1,00,70,800.68 | 5,70,800.68 |
| 2 | ಮುದ್ರಣ ವೆಚ್ಚ | 12,50,000.00 | 13,04,568.86 | 54,568.86 |
| 3 | ಸಾದಿಲ್ವಾರು ವೆಚ್ಚ | 50,00,000.00 | 58,86,503.63 | 8,86,503.63 |
| 4 | ಲೆಕ್ಕ ಪರಿಶೋಧನೆ | 5,80,300.00 | 582,500.00 | 2,200.00 |
| 5 | ಗಳಿಕೆ ರಜೆ ನಗದೀಕರಣ | 12,00,000.00 | 24,05,659.00 | 12,05,659.00 |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

13.10.2021 ಮಹಾಪ್ರಬಂಧಕರು (ಪ್ರ)

**ಕಾರ್ಯಸೂಚಿ-9**

## ಮಂಗಳೂರು ಕೆಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.
## 2020-21ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

| | | | |
|---|---|---|---|
| | ನಿವ್ವಳ ಲಾಭ | | **5,96,72,849.19** |
| 1. | ಮೀಸಲು ನಿಧಿ | 25% | 1,49,18,212.30 |
| 2. | ಸಹಕಾರಿ ಶಿಕ್ಷಣ ನಿಧಿ | 3% | 13,42,639.11 |
| 3. | ಧರ್ಮಾರ್ಥ ದತ್ತ ನಿಧಿ (Charity Fund) | 1.5% | 6,51,179.97 |
| 4. | ಜುಬಿಲಿ ಫಂಡ್ | 1% | 4,34,119.98 |
| 5. | Special Reserve under Section 36(1)(viii) of Income Tax Act | | 70,95,466.00 |
| 6. | Investment Fluctuation Reserve | | 1,18,00,000.00 |
| 7. | ಡಿವಿಡೆಂಡ್ | 10% | 1,78,00,000.00 |
| 8. | ಹಂಚಿ ಉಳಿದ ಮೊತ್ತ ಮೀಸಲು ನಿಧಿಗೆ | | 56,31,231.84 |
| | ಒಟ್ಟು | | **5,96,72,849.19** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

13.10.2021 ಮಹಾಪ್ರಬಂಧಕರು (ಪ್ರ)

**ಕಾರ್ಯಸೂಚಿ-11**

## ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ

| | |
|---|---|
| ದಿನಾಂಕ 31.03.2020ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 28391 |
| 2020-21ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಸದಸ್ಯರ ಸಂಖ್ಯೆ | 267 |
| 2020-21ನೇ ಸಾಲಿನಲ್ಲಿ ಸಮಾಪನೆ ಮಾಡಿರುವ ಸದಸ್ಯರ ಸಂಖ್ಯೆ | 412 |
| ದಿನಾಂಕ 31.03.2021ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 28246 |

ಮಂಗಳೂರು
ದಿನಾಂಕ :13.10.2021 ಮಹಾಪ್ರಬಂಧಕರು (ಪ್ರ)

ಅದಾಯ ಕರ ಕಾನೂನು ಪ್ರಕಾರ ಸದಸ್ಯ ಠೇವಣಿದಾರರ ಠೇವಣಿಗಳ ಮೇಲಿನ ಬಡ್ಡಿ ರು.40,000/-(ಸಾಮಾನ್ಯ ನಾಗರಿಕರು) ರು.50,000/-(ಹಿರಿಯ ನಾಗರಿಕರು) ಹಾಗೂ ಅದಕ್ಕಿಂತ ಹೆಚ್ಚಾದಲ್ಲಿ ಅರ್ಹ ಸಾಮಾನ್ಯ ನಾಗರಿಕರು ಫಾರಂ ನಂ. 15G, ಅರ್ಹ ಹಿರಿಯ ನಾಗರಿಕರು ಫಾರಂ ನಂ 15H ಕೊಡಬೇಕು. ಸದರಿ ಫಾರ್ಮು ನೀಡುವವರಿಗೆ ಪ್ಯಾನ್ ಕಾರ್ಡ್ ಕಡ್ಡಾಯವಾಗಿರುತ್ತದೆ. ಇಲ್ಲದ್ದಿದ್ದಲ್ಲಿ ಠೇವಣಿದಾರರು TDS ಕಟ್ಟಬೇಕಾಗುತ್ತದೆ.

ಕಾರ್ಯಸೂಚಿ–8

# ಮಂಗಳೂರು ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

## 2021–22ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಪಟ್ಟಿ

| ಕ್ರ. ಸಂ. | ಆದಾಯ | 2020–21ನೇ ವರ್ಷದ ನೈಜ ಖರ್ಚು | 2021–22ನೇ ವರ್ಷಕ್ಕೆ ಅಂದಾಜು ಅಯವ್ಯಯ |
|---|---|---|---|
| 1 | ಬಡ್ಡಿ ಜಮಾ | 42,31,27,663.02 | 44,00,00,000.00 |
| 2 | ರುಸುಮು ಮತ್ತು ದಲ್ಲಾಳಿ ಶುಲ್ಕ | 9,65,147.26 | 10,00,000.00 |
| 3 | ಇತರ ಜಮೆಗಳು | 1,62,51,207.88 | 2,50,00,000.00 |
| | **ಒಟ್ಟು** | **44,03,44,018.16** | **46,60,00,000.00** |
| | **ಖರ್ಚು** | | |
| 1 | ಠೇವಣಿ ಮತ್ತು ಪಡೆದ ಸಾಲಗಳ ಮೇಲಿನ ಬಡ್ಡಿ | 26,17,12,657.90 | 26,24,000.00.00 |
| 2 | ಸಂಬಳ ಮತ್ತು ಭತ್ತೆ | 4,40,92,829.32 | 5,50,00,000.00 |
| 3 | ನಿರ್ದೇಶಕರ ಮತ್ತು ಸ್ಥಳೀಯ ಸಮಿತಿ ಸದಸ್ಯರ ಶುಲ್ಕ ಮತ್ತು ಭತ್ಯೆ | 3,42,524.00 | 6,50,000.00 |
| 4 | ಬಾಡಿಗೆ, ತೆರಿಗೆ, ವಿಮಾ ಕಂತು, ವಿಧ್ಯುಚಕ್ತಿ, | 1,48,45,984.55 | 1,70,00,000.00 |
| 5 | ಕಾನೂನು ಖರ್ಚು | 2,31,597.00 | 4,50,000.00 |
| 6 | ಅಂಚೆ, ತಂತಿ ಮತ್ತು ದೂರವಾಣಿ | 21,13,917.05 | 26,00,000.00 |
| 7 | ಸವಕಳಿ ಮತ್ತು ರಿಪೇರಿ | 1,00,70,800.68 | 1,25,00,000.00 |
| 8 | ಲೇಖನ ಸಾಮಗ್ರಿ ಮತ್ತು ಮುದ್ರಣ ಖರ್ಚು | 13,04,568.86 | 16,00,000.00 |
| 9 | ಲೆಕ್ಕ ಪರಿಶೋಧನೆ | 5,49,800.00 | 5,80,300.00 |
| 10 | ಜಾಹಿರಾತು ಖರ್ಚು | 14,46,732.84 | 15,00,000.00 |
| 11 | ಸಾದಿಲ್ವಾರು ಖರ್ಚು | 58,86,503.63 | 65,00,000.00 |
| 12 | ಮಹಾಸಭೆಯ ಖರ್ಚು/ಚುನಾವಣಾ ವೆಚ್ಚ | 3,40,357.80 | 4,60,000.00 |
| 13 | ಸಹಕಾರಿ ನಿಧಿ ಏಜಂಟ್ ಕಮಿಷನ್ | 33,07,825.50 | 35,00,000.00 |
| 14 | ಹೂಡಿಕೆಗಳ ಮೇಲಿನ ಪ್ರೀಮಿಯಂ | 3,33,155.58 | 4,00,000.00 |
| 15 | ಬ್ಯಾಂಕಿಗೇತರ ಆಸ್ತಿಗಳಿಂದ ಆದ ನಷ್ಟ | 63,859.54 | 3,50,000.00 |
| 16 | ಕಾದಿರಿಸಿದ್ದು | | |
| | a) ಕಾಯಿದೆ ಅನ್ವಯ ಲೆಕ್ಕ ಪರಿಶೋಧನೆ ಬಗ್ಗೆ | 5,21,560.00 | 5,21,560.00 |
| | b) ಸಿಬ್ಬಂಧಿಗಳಿಗೆ ಅಧಿಲಾಭಾಂಶ | 21,12,349.00 | 28,00,000.00 |
| | c) ಗಳಿಕೆ ರಜೆ ನಗದೀಕರಣ | 24,05,659.00 | 13,00,000.00 |
| 17 | ಕಾಯ್ದಿರಿಸಿದ ಹಾಗೂ ತೆರಿಗೆ ಮೊದಲಿನ ಲಾಭ | 8,86,61,335.91 | 9,58,88,140.00 |
| | **ಒಟ್ಟು** | **44,03,44,018.16** | **46,60,00,000.00** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು

ದಿನಾಂಕ : 13.10.2021

ಮಹಾಪ್ರಬಂಧಕರು (ಪ್ರ)

ಬ್ಯಾಂಕಿನ ಉಪವಿಧಿ ಸಂಖ್ಯೆ 20 ರಂತೆ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:

(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–

(i) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು;

(ii) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಐದು ಸಾವಿರ ರೂಪಾಯಿಗಳು; ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ; ಅಥವಾ ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಹತ್ತು ಇರತಕ್ಕದ್ದು.

(2) ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

(3) ರಿಸರ್ವ್ ಬ್ಯಾಂಕು ನೀಡಿರುವ 'ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)' ನಿರ್ದೇಶನವು ಬ್ಯಾಂಕಿನ ಸದಸ್ಯರಿಗೆ ಅನ್ವಯಯಿಸತಕ್ಕದ್ದು.

ಕಾರ್ಯಸೂಚಿ 13

# ಮಂಗಳೂರು ಕಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ಇದರ ಉಪವಿಧಿ ತಿದ್ದುಪಡಿ

| ಹಾಲಿ ಇರುವ ಉಪವಿಧಿ | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ | ಕಾರಣಗಳು |
|---|---|---|
| 3 ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು (ಜಿಲ್ಲಾ ವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ. | ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು (ಜಿಲ್ಲಾ ವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ. | ಬ್ಯಾಂಕಿನ ಕಾರ್ಯಕ್ಷೇತ್ರವು ಈಗ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಸೀಮಿತವಾಗಿದ್ದು, ಬ್ಯಾಂಕಿನ ಗ್ರಾಹಕರು ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿಯೂ ವ್ಯಾಪಾರ ವಹಿವಾಟು ಹೊಂದಿದ್ದು, ಅವರಿಗೆ ಹೆಚ್ಚಿನ ಸೇವೆಯನ್ನು ನೀಡುವ ದೃಷ್ಟಿಯಲ್ಲಿ ಕರಾವಳಿಯ ಎಲ್ಲಾ ಭಾಗದ ಜನರಿಗೆ ವ್ಯವಹಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ನಮ್ಮ ಕಾರ್ಯವ್ಯಾಪ್ತಿಗೆ ಸೇರಿಸಿಕೊಂಡು ಅವರಿಗೆ ನಮ್ಮ ಬ್ಯಾಂಕಿನ ಹೆಚ್ಚಿನ ಸೇವೆ ನೀಡುವ ಉದ್ದೇಶದಿಂದ |
| 4 **ಪದಗಳ ಅರ್ಥ ವಿವರಣೆ :**<br>(28)'ಡೆಲಿಗೇಟ್' ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ. | **ಪದಗಳ ಅರ್ಥ ವಿವರಣೆ :**<br>(28) "ಡೇಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ." | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |

| | | |
|---|---|---|
| 11 **ಷೇರು ಹಣಕ್ಕಾಗಿ ಅರ್ಜಿ**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. | **ಷೇರು ಹಣಕ್ಕಾಗಿ ಅರ್ಜಿ**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.<br>ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಒಟ್ಟು ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |
| 18 **ಸದಸ್ಯನ ಕರ್ತವ್ಯಗಳು :**<br>ಬ್ಯಾಂಕಿನ ಯಾರೇ ಸದಸ್ಯನು –<br>(i). ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ; | **ಸದಸ್ಯನ ಕರ್ತವ್ಯಗಳು :**<br>**ಬ್ಯಾಂಕಿನ ಯಾರೇ ಸದಸ್ಯನು –**<br>(i). ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ; | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |
| 19 **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**<br>(3) ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**<br>(3) ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |

| | | |
|---|---|---|
| ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಮೂರು ವರ್ಷಗಳ ಅವಧಿಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷದವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | |
| **47 ಮತ ನೀಡಿಕೆ :**<br>(5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಇ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>(ಎಫ್) ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | **ಮತ ನೀಡಿಕೆ :**<br>(5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಇ) ಯುಕ್ತವಾಗಿ ತಿಳಿಸಲಾದ ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷದವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>(ಎಫ್) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |
| **58 ಮಂಡಳಿಯ ತೆರವಾದ ಸ್ಥಾನಗಳು :**<br>(1) ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. | **ಮಂಡಳಿಯ ತೆರವಾದ ಸ್ಥಾನಗಳು :**<br>(1) ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | ಇತ್ತೀಚಿಗಿನ ಸಹಕಾರ ಕಾಯಿದೆ ಮತ್ತು ಅಧಿನಿಯಮಗಳ ತಿದ್ದುಪಡಿಗನುಗುಣವಾಗಿ ಈ ತಿದ್ದುಪಡಿ ಪ್ರಸ್ತಾಪಿಸಿದೆ. |

## ANNUAL GENERAL MEETING - 21.12.2020







## ANNUAL PERFORMANCE REVIEW - 03.12.2020






















## CHRISTMAS CELEBRATION - 06.12.2020







## GST TRAINING TO THE STAFF - 23.01.2021





## BLESSING OF RENOVATED BRANCH AND CUSTOMER MEET PUTTUR BRACNH - 12.12.2020









## TDS TRAINING TO THE STAFF - 13.02.2021






Book Post
If Undelivered Please return to :
The General Manager,
MCC Bank Ltd,
Mulki Sundarram Shetty Road
Hampankatta, Mangaluru- 575 001

To